2

# ನೀರನ್ನು ನಿಲ್ಲಿಸಿದವರು ಯಾರು?

## (1 ಅರಸು 17:1-15)

ಎಂದಾದರು ನಿಮ್ಮ ಮನೆಯಲ್ಲಿ ನೀರು ನಿಂತದ್ದು ಇದೆಯಾ? ನೀರಿನ ಪೈಪ್‌ನಲ್ಲಿ ಎಲ್ಲಾದರೂ ಮುರಿತವಿರಬಹುದು. ಅಥವಾ ಲೈನನ್ನು ರಿಪೇರಿ ಮಾಡಲು ರಿಪೇರಿಯವನು ಅದನ್ನು ಬಂದುಮಾಡಿರಬಹುದು. ಅಥವಾ ಅದನ್ನು ನಿಲ್ಲಿಸಿರಬಹುದು. ಬಹುಶಃ ನಿಮ್ಮ ಹೆಂಡತಿ (ಅಥವಾ ಗಂಡ) ಬಿಲ್ಲನ್ನು ತುಂಬಲು ಮರೆತಿರಬಹುದು!

ಇಂಥದ್ದು ನಿಮಗೆ ಯಾವತ್ತು ಸಂಭವಿಸದೆ ಇರಬಹುದು, ಇದು ಸಂಭವಿಸುವದು ಅತಿ ಅಕಾಲಿಕ ಸಮಯದಲ್ಲಿ ಸಂಭವಿಸುತ್ತದೆ ಎಂಬುವುದರಲ್ಲಿ ಯಾವುದೇ ಸಂಶಯವಿಲ್ಲ: ನೀವು ಶೇವ್ ಮಾಡಿಕೊಳ್ಳುತ್ತಿದ್ದಾಗ ಮತ್ತು ಅದು ಅರ್ಧ ಮುಗಿದಿರು ವಾಗ, ನೀವು ನಿಮ್ಮ ಕೂದಲನ್ನು ತೊಳೆಯುತ್ತಿದ್ದೀರಿ ಮತ್ತು ಎಲ್ಲವೂ ಸಾಬೂನಿನ ನೀರಿನಿಂದ ಕೂಡಿದ್ದಾಗ, ಅಥವಾ ನೀವು ಸ್ನಾನವನ್ನು ಮಾಡುತ್ತಿದ್ದೀರಿ ತಲೆಯಿಂದ ಕಾಲಿನವರೆಗೂ ಸಾಬೂನಿಂದ ತುಂಬಿದೆ!

ಇಂಥದ್ದು ನಿಮಗೆ ಎಂದಾದರೂ ಸಂಭವಿಸಿದ್ದಾದರೆ, ನಿಮ್ಮಲ್ಲಿ ತಕ್ಷಣವೇ ಎರಡು ಪ್ರಶ್ನೆಗಳು ಹುಟ್ಟುತ್ತವೆ: (1) "ನೀರನ್ನು ಯಾರು ನಿಲ್ಲಿಸಿದರು?" ಮತ್ತು (2) *"ಯಾಕೆ?"*

1 ಅರಸು 17:1-15ರ ವಿಚಾರದಲ್ಲಿ, ನಾವು "ಯಾಕೆ?" ಎಂಬ ಪ್ರಶ್ನೆಯನ್ನು ಉಚ್ಛರಿಸುವವರಾಗಿದ್ದೇವೆ. ಆ ಪ್ರಶ್ನೆಯು ನಾವು ಕಠಿಣವಾದ ಸಮಯದಲ್ಲಿ ನಾವಿರುವಾಗ ಹೊಂದುವವರಾಗಿದ್ದೇವೆ. "ಕರ್ತನೇ ಇದು ಯಾಕೆ ಸಂಭವಿಸಿತು?" "ಕರ್ತನೇ ನನ್ನ ಪಾಲಕರಾಗಲಿ ನನ್ನ ಮಕ್ಕಳಾಗಲಿ ಸಾಯಬೇಕಿತ್ತು?" ಯಾಕೆ, ಯಾಕೆ, ಯಾಕೆ?

"ಯಾಕೆ?" ಎಂಬ ಪ್ರಶ್ನೆಯೊಂದಿಗೆ ಹೋರಾಡುತ್ತಿರುವಂತೆ ನಾವು ಯೆಶಾಯ 55:8, 9ನ್ನು ನಾವು ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಲೇಬೇಕು:

> "ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ, ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆ ಗಳೂ ಅಷ್ಟು ಉನ್ನತವಾಗಿವೆ."

ದೇವರ ಮಾರ್ಗಗಳು ನಮ್ಮ ಮಾರ್ಗಗಳಲ್ಲ. ನಮಗೆ ಕಲಿಯುವುದಕ್ಕೋಸ್ಕರ ಇದೊಂದು ಮಹತ್ವದ ಸತ್ಯವಾಗಿದೆ.

ನಾವು ಇದನ್ನು ದೂರದಲ್ಲಿ ವೀಕ್ಷಿಸುವಾಗ ಹಾಗೂ ಇದನ್ನು ನಮಗೆ ಅನ್ವಯಿಸಿಕೊಳ್ಳದೇ ಇತರರಿಗೆ ಎಲ್ಲಿಯವರೆಗೆ ಅನ್ವಯಿಸುತ್ತಾ ಇರುತ್ತೇವೆಯೋ ಅಲ್ಲಿಯವರೆಗೆ ಸತ್ಯದ ಸೊಗಸಾದ ಗ್ರಹಿಕೆಯನ್ನು ನಾವು ಹೊಂದುತ್ತೇವೆ. ಉದಾಹರಣೆಗಾಗಿ, ಒಂದು ವೇಳೆ ನಾವು ಬೋಧನೆಗಳ ವಿಷಯವಾಗಿ ಮಾತಾಡುತ್ತಿರುವುದಾದರೆ ಕೆಲವರು "ಅದು ನನಗೆ ಯಾವುದೇ ಅರ್ಥವನ್ನು ಉಂಟುಮಾಡುವದಿಲ್ಲ" ಎಂದು ಹೇಳಿದರೆ, ನಾವು ತಕ್ಷಣವೆ ಹೀಗೆ ಪ್ರತಿಕ್ರಿಯಿಸಬಹುದು "ನೆನಪಿಡು, ದೇವರ ಮಾರ್ಗಗಳು ನಮ್ಮ ಮಾರ್ಗಗಳಲ್ಲ." ಒಬ್ಬ ಅಪನಂಬಿಗಸ್ತನಾದ ಸ್ನೇಹಿತನು ನಮಗೆ ಜೀವನದ ಅನೀತಿಯ ಬಗೆಗೆ ವಿವರಿಸಲು ಕೇಳಿದಾಗ, ನಾವು "ದೇವರ ಮಾರ್ಗಗಳು ನಮ್ಮ ಮಾರ್ಗಗಳಲ್ಲ" ಎಂದು ಹಾಲಿಕೆಯ ಉತ್ತರವನ್ನು ಕೊಡಬಹುದು.

ಹೀಗಿದ್ದಾಗ, ನಮ್ಮ ಜೀವಿತಗಳು ನಾವು ಯೋಜಿಸಿದುದ್ದರ ವಿರುದ್ಧ ತಿರುಗಿಕೊಂಡಾಗ,

ನಮ್ಮ ನಂಬಿಕೆಯ ಹಲಿದು ಹೋಗುವಷ್ಟು ಹಿಗ್ಗಿಸಲ್ಪಟ್ಟಾಗ ನಾವು ನಮಗಾದಷ್ಟು ಯೋಗ್ಯವಾದುದನ್ನು ಮಾಡುತ್ತಿರುವಾಗ ನಾವು ಮಾಡುವ ಪ್ರತಿಯೊಂದು ತಪ್ಪಾಗಿ ಹೋಗುವುದನ್ನು ಕಂಡಾಗ ನಾವು ಪ್ರೀತಿಸುವವರನ್ನು ಕಳೆದು ಕೊಂಡಾಗ, ನಾವು ಅತ್ತು ಬಿಡುತ್ತೇವೆ. "ಯಾಕೆ?" ಸಾಮಾನ್ಯವಾಗಿ ಅಲ್ಲಿ ಕೆಲವರು "ಇದಲಿಂದ ಹೊರಬರದೇ ಯಾವುದೇ ಯಾವುದೇ ಮಾರ್ಗವಿಲ್ಲ, ದೇವರ ಮಾರ್ಗಗಳು ನಮ್ಮ ಮಾರ್ಗಗಳಲ್ಲ. ಎಲ್ಲ ಕಾರ್ಯಗಳೂ ಒಳ್ಳೆಯದಕ್ಕಾಗಿಯೇ ಆಗುತ್ತಿವೆ ಎಂದು ನಂಬು" ಎಂದು ಹೇಳುವುದನ್ನು ಕೇಳಿದಾಗ ಅಲ್ಪ ಸಮಾಧಾನವಾಗುತ್ತದೆ. ಹತ್ತಿರದಿಂದ ಸತ್ಯಾಂಶಗಳನ್ನು ಗ್ರಹಿಸಲು ಶಕ್ತವಾಗುತ್ತದೆ.

ಈ ಅಧ್ಯಯನದಲ್ಲಿಯ ಎಲ್ಲಾ ಸಮಸ್ಯೆಗಳನ್ನು ನಾವು ಪಲಿಹಲಿಸಲು ಸಾಧ್ಯವಿಲ್ಲ, ಆದರೆ 1 ಅರಸು 17:1-15 ಎಲ್ಲಲಿಗೂ ಕಲಿಯಲು ಇರುವ ಒಂದು ಪಾಠವಾಗಿದೆ. ಯಾರು ನೀರನ್ನು ನಿಲ್ಲಿಸಿದರು - ಮತ್ತು ಯಾಕೆ?

## ದೇವರು ಇಸ್ರಾಯೇಲಿನಲ್ಲಿ ನೀರನ್ನು ಯಾಕೆ ನಿಲ್ಲಿಸಿದನು? (17:1)

ನಮ್ಮ ವೇದಾಧ್ಯಯನದ ಮೊದಲ ಭಾಗದಲ್ಲಿ (1 ಅರಸು 17:1), "ದೇವರು ಇಸ್ರಾಯೇಲಿನಲ್ಲಿ ನೀರನ್ನು ಯಾಕೆ ನಿಲ್ಲಿಸಿದನು?" ಎಂಬ ಈ ಪ್ರಶ್ನೆಯನ್ನು ಕೇಳೋಣ.

ಈ ಪ್ರಶ್ನೆಗೆ ಉತ್ತಲಿಸಲು, ಇಸ್ರಾಯೇಲಿನಲ್ಲಿ ಏನು ಸಂಭವಿಸಿತು ಎಂಬುದನ್ನು ಪುನರಾವರ್ತಿಸುವುದು ನಮಗೆ ಅವಶ್ಯವಿದೆ. ಧರ್ಮೋಪದೇಶಕಾಂಡ 7:1-6ರಲ್ಲಿ ಮೋಶೆಯು ದೇವಜನಲಿಗೆ ಎಚ್ಚಲಿಸಿದನು:

> ನೀವು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಹೋಗುವ ದೇಶದಲ್ಲಿ ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಸೇರಿಸಿ ಸಂಖ್ಯೆಯಲ್ಲಿಯೂ ಬಲದಲ್ಲಿಯೂ ನಿಮಗೆ ಮೀರುವ ಹಿತ್ತಿಯರು, ಗಿರ್ಗಾಷಿಯರೂ, ಅಮೋರಿಯರು, ಕಾನಾನ್ಯರು, ಪೆರಜ್ಜೀಯರು, ಹಿವ್ವಿಯರು, ಯೆಬೂಸಿಯರೂ ಎಂಬ ಏಳು ಜನಾಂಗಗ ಳನ್ನು ನಿಮ್ಮ ಎದುರಿನಿಂದ ಹೊರಡಿಸುವವನಾಗಿ ... *ಅವರನ್ನು ನಿಮ್ಮಿಂದ ಪರಾಜಯಪಡಿಸುವಾಗ ನೀವು ಅವರನ್ನು ನಿಶ್ಶೇಷವಾಗಿ ಸಂಹಲಿಸ ಬೇಕು. ಅವರ ಸಂಗಡ ಒಡಂಬಡಿಕೆ ಮಾಡಿಕೊಳ್ಳಬಾರದು, ಅವರನ್ನು ಕನಿಕಲಿಸಬಾರದು. ಅವರೊಡನೆ ಬೀಗತನ ಮಾಡಬಾರದು, ಅವರ ಮಕ್ಕಳಿಗೆ ಹೆಣ್ಣುಗಳನ್ನು ಕೊಡಲೂ ಬಾರದು. ಅವಲಿಂದ ತರಲೂ ಬಾರದು ಹಾಗೆ ಮಾಡಿದರೆ ಅವರು ನಿಮ್ಮ ಮಕ್ಕಳನ್ನು ಯೆಹೋವನ ಸೇವೆಯಿಂದ ತಪ್ಪಿಸಿ ಇತರ ದೇವರುಗಳನ್ನು ಪೂಜಿಸುವುದಕ್ಕೆ ತಿರುಗಿಸಿಸಾರು. ಆಗ ಯೆಹೋವನು ನಿಮ್ಮ ಮೇಲೆ ಕೋಪಗೊಂಡು ಬೇಗನೆ ನಿಮ್ಮನ್ನು ನಾಶಮಾಡುವನು ...*
>
> "ನೀವು ನಿಮ್ಮ ದೇವರಾದ ಯೆಹೋವನಿಗೆ ಮೀಸಲಾದ ಜನರಾಗಿದ್ದೀರಲ್ಲವೇ ಆತನು ಭೂಲೋಕದಲ್ಲಿರುವ ಸಮಸ್ತ ಜನಾಂಗಗಳಲ್ಲಿ ನಿಮ್ಮನ್ನೇ ಸ್ವಕೀಯ ಜನವಾಗುವದಕ್ಕೆ ಆದುಕೊಂಡನು." (ಒತ್ತಿ ಹೇಳಿದ್ದು ನನ್ನದು.)

ಹೇಗೋ, ಇಸ್ರಾಯೇಲು ದೇವರ ಆಜ್ಞೆಗೆ ಲಕ್ಷಕೊಡಲಿಲ್ಲ. ಅಹಾಬನು ಸಿಂಹಾಸನದ ಮೇಲಿದ್ದನು ಮತ್ತು ಆತನ ಬದಿಯಲ್ಲಿ ಫೋಯನಿಕದ ರಾಣಿಯೂ ಇಸ್ರಾಯೇಲಿಗೆ ಬಾಳನನ್ನು ಪಲಿಚಯಿಸಿದವಳೂ, ಯೆಹೋವನ ದೇವಾಲಯಗಳನ್ನು ನಾಶಪಡಿಸಿದವಳೂ ಮತ್ತು ಆತನ ಪ್ರವಾದಿಗಳನ್ನು ಕೊಂದವಳು ಆದ ಇಜೆಬೇಲಳು ಇದ್ದಳು. ಇಸ್ರಾಯೇಲು ಅತಿ ದೊಡ್ಡ ಅನುಪಾತದಲ್ಲಿ ಆತ್ಮೀಕ ನಾಶನವನ್ನು ಎದುಲಿಸುತ್ತಿತ್ತು. ಏನಾದರೂ ಮಾಡಬೇಕಿತ್ತು.

"ಕರ್ತನೇ ನೀನೇನು ಮಾಡಬಹುದು? ಆಕಾಶದಿಂದ ಬೆಂಕಿಯನ್ನು ಸುಲಿಸಿ

ಇಸ್ರಾಯೇಲ್ಯರನ್ನು ಅಳಿಸಿಹಾಕುವೆಯಾ?" ಎಂದು ನಾವು ಕೇಳಬಹುದು.

ದೇವರು ಹೀಗೆ ಉತ್ತರಿಸುತ್ತಾನೆ, "ಇನ್ನೂ ಆ ಸಮಯವು ಬಂದಿಲ್ಲ."

"ಶಕ್ತಿಯುತವಾದ ಸೈನ್ಯವು ಈ ನೆಲವನ್ನು ಕೊಚ್ಚಿಕೊಂಡು ಹೋಗುವುದರ ಬಗೆಗೆ ಹೇಗನ್ನಿಸುತ್ತದೆ?"

"ಇನ್ನೂ ಆ ಸಮಯವು ಬಂದಿಲ್ಲ."

"ನಂಬಿಗಸ್ತರಾದ ಬೋಧಕರು, ಪ್ರವಾದಿಗಳು ಮತ್ತು ಪೂಜಾರಿಗಳ ಪರಾಕ್ರಮವುಳ್ಳ ತಂಡವು ಬಾಳನನ್ನು ಎದುರಿ ಘರ್ಷಣೆಗೆ ಇಳಿದುದರ ಬಗೆಗೆ ಹೇಗನ್ನಿಸುತ್ತದೆ?"

"ಇನ್ನೂ ಸಮಯವು ಬಂದಿಲ್ಲ."

"ಸುಸಂಸ್ಕೃತನಾದ ರಾಜತಾಂತ್ರಿಕನೊಬ್ಬನು ಅರಸನ - ಮನ್ನಣೆಯನ್ನು ಪಡೆದು, ಆತನನ್ನು ನಿನ್ನಡೆಗೆ ತರುವುದರ ಬಗೆಗೆ ಹೇಗೆನ್ನಿಸುತ್ತದೆ?"

"ಇನ್ನೂ ಸಮಯವು ಬಂದಿಲ್ಲ."

"ಇಲ್ಲ," ಆಗ ದೇವರು ಹೇಳಿದನು, "ನನ್ನ ಮನುಷ್ಯನು ಎಲೀಯನು."

"ಎಲೀಯ? ಆತನ ಬಗೆಗೆ ನಾನೆಂದು ಕೇಳಿಲ್ಲ. ಆತನೆಡೆಗೆ ಒಂದು ನೋಟವನ್ನು ಹರಿಸೋಣ. ಖಂಡಿತವಾಗಿ ಕಾಡು ರೀತಿಯಲ್ಲಿ ಕಾಣುವ ವ್ಯಕ್ತಿಯ ಬಗೆಗೆ ಹೇಳುತ್ತಿಲ್ಲವಷ್ಟೆ? ತಿಂಗಳು ಗಟ್ಟಲೇ ಕ್ಷೌರವನ್ನು, ತಲೆಗೂದಲನ್ನು ಕತ್ತರಿಸಿಕೊಂಡಿದ್ದನ್ನು ಮಾಡಿಕೊಂಡಿರಲಿಕ್ಕಿಲ್ಲ, ಮತ್ತು ಬಲು ಸಮಯದಿಂದ ಸ್ನಾನವನ್ನೂ ಮಾಡಿಕೊಂಡಿರಲಿಕ್ಕಿಲ್ಲ! ಆತನ ಧ್ವನಿಯು ಕಿವಿಗೆ ಕರೆಕರೆಯನ್ನುಂಟು ಮಾಡುವುದಾಗಿತ್ತು. ಅವನನ್ನೇ ಯಾಕೆ? ಕರ್ತನೇ ಯಾಕೇ?"

ಆಗ ದೇವರು, "ನನ್ನ ಆಲೋಚನೆಗಳು ನಿನ್ನ ಆಲೋಚನೆಗಳಲ್ಲ, ಮತ್ತು ನನ್ನ ಮಾರ್ಗಗಳು ನಿನ್ನ ಮಾರ್ಗಗಳಲ್ಲ. ಈತನೇ ಇಸ್ರಾಯೇಲಿನಲ್ಲಿನ ನನ್ನ ಮನುಷ್ಯನು."

ಆ ದೃಷ್ಯವು ಈ ಅಧ್ಯಾಯದಲ್ಲಿ ನಾವು ಕಲಿಯುವುದಕ್ಕಿರುವ ಪರಿಚ್ಛೇದಕ್ಕೆ ದಾರಿಮಾಡಿಕೊಟ್ಟಿದೆ. ದೇವರು ಇಸ್ರಾಯೇಲ್ಯರ ಆತ್ಮೀಕ ಸಮಸ್ಯೆಗಳೊಂದಿಗೆ ವ್ಯವಹರಿಸುತ್ತಿದ್ದಾನೆ, ಆದರೆ ಅದನ್ನು ತನ್ನ ರೀತಿಯಲ್ಲಿ, ತನ್ನ ಸಮಯದಲ್ಲಿ, ತನ್ನ ಯೋಜನೆಗೆ ಅನುಸಾರವಾಗಿ ವ್ಯವಹರಿಸುತ್ತಿದ್ದಾನೆ.

ಕಳೆದ ಸಮಯದಲ್ಲಿ ನಾವು ಎಲ್ಲಿ ನಿಲ್ಲಿಸಿದ್ದೆವೋ ಅಲ್ಲಿಂದ ಪ್ರಾರಂಭಿಸೋಣ: ಎಲೀಯನು ಅಹಾಬನ ಮುಂದೆ ಬಂದನು. ಎಲೀಯನು ಅಹಾಬನಿಗೆ "ನಾನು ಸನ್ನಿಧಿ ಸೇವೆ ಮಾಡುತ್ತಿರುವ ಇಸ್ರಾಯೇಲ್ ದೇವರಾದ ಯೆಹೋವನಾಣೆ, ನಾನು ಸೂಚಿಸಿದ ಹೊರತು ಇಂದಿನಿಂದ ಕೆಲವು ವರುಷಗಳವರೆಗೆ ಮಳೆಯಾಗಲಿ ಮಂಜಾಗಲಿ ಬೀಳುವದಿಲ್ಲ ಅಂದನು" (1 ಅರಸು 17:1).

ನೀರಿಲ್ಲದ ದಿನಗಳು ಅನೇಕ ಅನಾನುಕೂಲಕ್ಕೆ ಕಾರಣವಾಗುತ್ತದೆ. ನೀರಿಲ್ಲದ ವಾರಗಳು ಕಿರಿಕಿರಿಯನ್ನುಂಟುಮಾಡುತ್ತವೆ. ನೀರಿಲ್ಲದ ತಿಂಗಳುಗಳು ಉಗ್ರವಾಗಿರುತ್ತವೆ. ಆದರೆ ನೀರಿಲ್ಲದ ವರ್ಷಗಳು ದುರಂತಮಯವಾಗಿರುತ್ತವೆ! ಆಗ ಮರಣವು ಸಹಜವಾದದ್ದೇ; ನೀರನ್ನು ಬಿಟ್ಟು ಜೀವನವಿಲ್ಲ. ಅದರಲ್ಲೂ "ವರ್ಷಗಳವರೆಗೆ" ಎಂದರೆ ಅದು ಇನ್ನೂ ವಿಪರೀತ ಹೊಸ ಒಡಂಬಡಿಕೆಯಲ್ಲಿ ಎರಡುಸಾರಿ *ಮೂರುವರ್ಷ ಆರು ತಿಂಗಳು* ಅನಾವೃಷ್ಟಿ ಮುಂದುವರೆಯಿತು ಎಂದು ಟಿಪ್ಪಣಿ ಮಾಡಲ್ಪಟ್ಟಿದೆ (ಲೂಕ 4:25; ಯಾಕೋಬ 5:17).

ದೇವರು ಯಾಕೆ ಅನಾವೃಷ್ಟಿಯ ಆಜ್ಞೆಯನ್ನು ತಂದನು? ಇದಕ್ಕೆ ಉತ್ತರಿಸಲು ಬೈಬಲಿನ ಮುಂದೆ ನಾವು ಹೋಗೋಣ. ಧರ್ಮೋಪದೇಶಕಾಂಡ 7ರಲ್ಲಿ ವಿಗ್ರಹಾರಧನೆಗೆ ಹೋಗಬಾರದೆನ್ನುವ ದೇವರ ಎಚ್ಚರಿಕೆಯನ್ನು ನಾವು ನೋಡಿದೆವು. ಅದಕ್ಕೆ ಸಂಬಂಧಿಸಿದ ಎಚ್ಚರಿಕೆಯನ್ನು ಅದೇ ಪುಸ್ತಕ ಅಧ್ಯಾಯ 11ರಲ್ಲಿ ಗಮನಿಸಿರಿ:

> ನೀವು ಎಚ್ಚರದಿಂದಿರಬೇಕು; ನೀವು ಭ್ರಾಂತಿಗೊಂಡು ಯೆಹೋವನು ಹೇಳಿದ

ಮಾರ್ಗವನ್ನು ಬಿಟ್ಟು ಇತರ ದೇವರುಗಳನ್ನು ಅವಲಂಬಿಸಿ *ಪೂಜಿಸಿದರೆ ಆತನು ನಿಮ್ಮ ಮೇಲೆ ಸಿಟ್ಟುಗೊಂಡು ಮಳೆಬಾರದಂತೆ* ಆಕಾಶವನ್ನು ಮುಚ್ಚಿಬಿಟ್ಟಾನು; ಆಗ ಭೂಮಿಯಲ್ಲಿ ಮಳೆಯಾಗದೆ ಯೆಹೋವನು ನಿಮಗೆ ಕೊಡುವ ಆ ಉತ್ತಮ ದೇಶದಲ್ಲಿ ನೀವು ಉಳಿಯದೆ ಬೇಗ ನಾಶವಾಗಿ ಹೋಗುವಿರಿ (ವಚನಗಳು 16:17; ಒತ್ತಿ ಹೇಳಿದ್ದು ನನ್ನದು).

ಇದು ತಮ್ಮ ಕ್ರಿಯೆಗಳ ಸಂದಿಗ್ಧತೆಯಲ್ಲಿ ತೊಂದರೆಪಡುತ್ತಿರುವ ಮನುಷ್ಯನ ಜೀವಿತದ ನಿಜಾಂಶವಾಗಿದೆ. ನಾವೆಲ್ಲರೂ ಈ ರೀತಿಯ ಉದ್ಗಾರವನ್ನು ಕೇಳಿರಬಹುದು. "ಇದನ್ನು ನೀನೇ ನಿನ್ನ ಕೈಯಾರೆ ತಂದುಕೊಂಡಿದ್ದಿ" ಅನೇಕ ಸಂದರ್ಭಗಳಲ್ಲಿ - ಯಾವಾಗಲೂ ಅಲ್ಲ ಆದರೂ ಅನೇಕ ಸಾರಿ ನಮ್ಮ ತೊಂದರೆಗಳಿಗಾಗಿ ಬೇರೊಬ್ಬರನ್ನು ದೂಷಿಸಲು ಸಾಧ್ಯವಿಲ್ಲ. ಆದರೆ ನಮ್ಮನ್ನೇ.

ಬೈಬಲಿನ ಅಂತ್ಯದಲ್ಲಿ ಪಜಲ್‌ನೊಳಗೆ ಸರಿಹೊಂದುವ ಮತ್ತೊಂದು ತುಂಡಿನತ್ತ ನಾವು ಸಾಗೋಣ. ಯಾಕೋಬನು ಕ್ರೈಸ್ತರಿಗೆ ಬರೆದ ತನ್ನ ಪತ್ರಿಕೆಯಲ್ಲಿ ನಾವು ಎಲ್ಲಿಯೂ ಕಂಡುಕೊಳ್ಳದ ಕಥೆಯ ವಿವರವನ್ನು ಕೂಡಿಸುತ್ತಾನೆ: "ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು. *ಅವನು ಮಳೆಯು ಬರಬಾರದೆಂದು* ಬಹಳವಾಗಿ ಪ್ರಾರ್ಥಿಸಲು ಮೂರು ವರ್ಷ ಆರು ತಿಂಗಳವರೆಗೂ ಮಳೆಯು ಬೀಳಲಿಲ್ಲ" (ಯಾಕೋಬ 5:17; ಒತ್ತಿ ಹೇಳಿದ್ದು ನನ್ನದು).

ಪ್ರಾರ್ಥನೆಗೆ ಉತ್ತರವಾಗಿ ಅನಾವೃಷ್ಟಿಯು ಬಂದಾಗ, ದೇವರು ಮಾಡಬಹುದಾಗಿರುವ ಧರ್ಮೋಪದೇಶಕಾಂಡ 11:16, 17ರಲ್ಲಿ ಇರುವ ಗದರಿಸುವುದಕ್ಕೆ ಇರುವ ಪ್ರಾರ್ಥನೆ ಇದಾಗಿದೆ. ಶಕ್ತಿಯುತವಾದ ಪ್ರಾರ್ಥನೆಗೆ ಅತಿದೊಡ್ಡ ಉದಾಹರಣೆಯಾಗಿದೆ! ಈ ಮೂರುವರೆ ವರ್ಷದಲ್ಲಿ ಸಂಪೂರ್ಣ ರಾಷ್ಟ್ರದ ಆರ್ಥಿಕತೆಯು ಒಡೆದು ಹೋಯಿತು!

ನಮ್ಮ ಪ್ರಶ್ನೆಗಳಿಗೆ ಹಿಂತಿರುಗೋಣ. ಇಸ್ರಾಯೇಲಿನಲ್ಲಿ ದೇವರಿಗೆ ನೀರನ್ನು ಏಕೆ ನಿಲ್ಲಿಸಿದನು ಎಂದು ನಾವು ಆತನಿಗೆ ಕೇಳುವಾಗ ಆತನು ಹೀಗೆ ಉತ್ತರಿಸಬಹುದು, (1) "ಯಾಕೆಂದರೆ ಜನರು ನನ್ನ ಮಾತಿಗೆ ಅವಿಧೇಯರಾದರು ಮತ್ತು ಶಿಕ್ಷೆಗೆ ಅರ್ಹರಾದರು"; (2) "ಯಾಕೆಂದರೆ ನನ್ನ ನಂಬಿಗಸ್ತ ಸೇವಕನಾದ ಎಲೀಯನು ಮನಃ ಪೂರ್ವಕವಾಗಿ ಕೇಳಿಕೊಂಡನು, ನೀತಿವಂತ ಮನುಷ್ಯನ ಅತ್ಯಾಸಕ್ತಿಯುಳ್ಳ ಪ್ರಾರ್ಥನೆಯು ಹೆಚ್ಚು ಬಲವಾದುದ್ದು" ಅಥವಾ (3) "ನಾನೇ ದೇವರೆಂದು ತೋರಿಸಲು, ಮತ್ತು ನನ್ನ ಜನರು ತಮ್ಮ ಮಾರ್ಗದಲ್ಲಿ ತಪ್ಪಿದ್ದಾರೆಂದು ಹೀಗೆ ಅವರು ಪಶ್ಚಾತ್ತಾಪಡಬೇಕು ಮತ್ತು ನನ್ನಡೆಗೆ ತಿರುಗಿಕೊಳ್ಳಬೇಕು!"

ನೀನು ಮತ್ತು ನಾನು ದೇವರ ಮಾರ್ಗಗಳನ್ನು ಸಂಪೂರ್ಣವಾಗಿ ಅರಿತುಕೊಂಡಿಲ್ಲ, ಆದರೆ ಬೆರಗಿನಿಂದ ತುಂಬಿದವುಗಳನ್ನು ಯೋಚಿಸಬಹುದು ಮತ್ತು ಪರಾಮರ್ಶಿಸಬಹುದು. ಇದನ್ನು ಗಮನಿಸಿರಿ: ದೇವರು ಮೂರುವರೆ ವರ್ಷಗಳವರೆಗೆ ನೀರನ್ನು ನಿಲ್ಲಿಸುವ ಸರಳವಾದ ಯೋಜನೆಯ ಮೂಲಕ ಸಂಪೂರ್ಣ ರಾಷ್ಟ್ರದ ಲಕ್ಷವನ್ನು ಪಡೆಯುವಂತಹ ಪರಿಣಾಮಕಾರಿಯಾದ ಮಾರ್ಗದ ಬದಲು ಇನ್ನಾವುದನ್ನು ಮಾಡಲು ಸಾಧ್ಯ?

## ದೇವರು ಕೆರೀತ್ ಹಳ್ಳದ ನೀರನ್ನು ಏಕೆ ನಿಲ್ಲಿಸಿದನು? (17:2-7)

ನಮ್ಮ ಕಥೆಯ ಎರಡನೆಯ ಭಾಗದೆಡೆಗೆ ಹೊರಳುತ್ತಾ (17:2-7), ನಾವು ಹೀಗೆ ಕೇಳಬಹುದು, "ದೇವರೇ ಯಾಕೆ ಕೆರೀತ್ ಹಳ್ಳದ ನೀರನ್ನು ನಿಲ್ಲಿಸಿದಿ?"

"ತರುವಾಯ ಯೆಹೋವನು ಎಲಿಯನಿಗೆ ದೇವರ ವಾಕ್ಯವು ಉಂಟಾಯಿತು ..."

(ವಚನ 2) ಎಂದು ಓದುತ್ತೇವೆ. ಒಂದು ಸಾರಿಗೆ ಒಂದು ಹೆಜ್ಜೆಯನ್ನು ತೆಗೆದುಕೊಳ್ಳ ಬೇಕೆಂದು ಎಲೀಯನಿಗೆ ಹೇಳಲ್ಪಟ್ಟಿತು. ಆತನು ಆಹಾಬನ ಮುಂದೆ ನಿಂತನು ಮತ್ತು ದೇವರ ಸಂದೇಶ ವನ್ನು ಬಿಡುಗಡೆಮಾಡಿದನು, ಮುಂದೇನು ಮಾಡಬೇಕೆಂದು ಆತನಿಗೆ ತಿಳಿದಿರಲಿಲ್ಲ. ಆಗ "ಯೆಹೋವನು ಎಲೀಯನಿಗೆ ಹೇಳಿದನು." ಆತನು ಕೆರೀತ್ ಹಳ್ಳಕ್ಕೆ ಹೋದನು ಸಮಾರು ಒಂದು ವರ್ಷ ಅಥವಾ ಹೆಚ್ಚು ಸಮಯದವರೆಗೆ ಅಲ್ಲಿದ್ದನು. ಆ ಸಮಯದ ಅಂತ್ಯದಲ್ಲಿ ದೇವರು ಅವನೊಡನೆ ಮಾತನಾಡಿದನು (ವಚನ 8), ಮತ್ತು ಆತನು ಚಾರೆಪ್ತಾಕ್ಕೆ ಹೋದನು. ಮೂರುವರೆ ವರ್ಷಗಳ ಅಂತ್ಯದಲ್ಲಿ ನಾವು ತಿರುಗಿ ಈ ರೀತಿ ನೋಡುತ್ತೇವೆ, "ಅನೇಕ ದಿವಸಗಳಾದ ನಂತರ ಎಲೀಯನಿಗೆ ಯೆಹೋವನ ವಾಕ್ಯವುಂಟಾಯಿತು" (1 ಅರಸು 18:1).

ಆ ಮೂಲದ ಮೇಲೆ ವ್ಯವಹರಿಸುವದನ್ನು ನಾನು ಇಷ್ಟಪಡಲಾರೆ, ನೀವು? ನಾನು ಯೋಜನೆಮಾಡುವುದನ್ನು ಬಯಸುವವನಾಗಿದ್ದೇನೆ. ಸಂಗತಿಗಳು ಕಾರ್ಯರೂಪಕ್ಕೆ ಬರುವುದನ್ನು ನಾನು ಬಯಸುವವನಾಗಿದ್ದೇನೆ. ಸಾಧ್ಯವಾದಷ್ಟು ಆರಂಭದಿಂದಲೂ ಕೊನೆಯವರೆಗೂ ಉತ್ತಮವಾಗಿರುವುದನ್ನು ನಾನು ಬಯಸುವವನಾಗಿದ್ದೇನೆ. ಹೇಗೋ, ಅನೇಕ ಸಾರಿ ಸಂಗತಿಗಳು ಜೀವನದಲ್ಲಿ ಇದ್ದ ಹಾಗೆ ಇರುವುದಿಲ್ಲ. ಕೆಲಸಾರಿ ಒಂದೇ ಸಮಯದಲ್ಲಿ ದಿನಕ್ಕೆ ಒಂದು ಸಾರಿ, ಒಂದು ಸಮಯಕ್ಕೆ ಒಂದು ಹೆಜ್ಜೆ ಅಷ್ಟೇ.

ಎಲೀಯನು ದೇವರ ಮನುಷ್ಯನು, ದೇವರು ಎಲೀಯನನ್ನು ಉಪಯೋಗಿಸಿ ಕೊಂಡನು ಯಾಕೆಂದರೆ ಆತನು ಎಲ್ಲವನ್ನೂ ಅರ್ಥಮಾಡಿ ಕೊಂಡಂತವ ನಾಗಿರಲಿಲ್ಲ. ಆತನು ಒಂದು ಸಾರಿಗೆ ಒಂದೇ ಹೆಜ್ಜೆಯನ್ನು ಇಡಬಲ್ಲವನಾಗಿದ್ದನು. ("ಕರ್ತನೇ, ನೀನು ಹಾಗೇ ಬಯಸಿದಲ್ಲಿ ನಾನು ಹಾಗೆ ಮಾಡುತ್ತೇನೆ.")

2ನೇಯ ವಚನಕ್ಕೆ ತಿರುಗುವಾಗ, ನಾವು ಎರಡನೆಯ ಹೆಜ್ಜೆಯನ್ನು ಓದುವವರಾಗಿದ್ದೇವೆ.

ಎರಡನೆಯ ಹೆಜ್ಜೆ ಏನಾಗಿರಬೇಕೆಂದುಕೊಳ್ಳುತ್ತೀರಿ? ಎಲೀಯನ ಸನ್ನಿವೇಶದಲ್ಲಿ ಇರುವುದನ್ನು ಊಹಿಸಿಕೊಳ್ಳಿರಿ. ನಾವು ಈಗಾಗಲೇ ಅರಸನಿಗೆ ಘೋಷಣೆಯನ್ನು ಮಾಡಿದ್ದಾಗಿದೆ. ಈಗೇನು? ನ್ಯಾಷನಲ್ ಟಿ.ವಿ.ಯಲ್ಲಿ ಒಂದು ಪತ್ರಿಕಾಗೋಷ್ಠಿಯನ್ನು ಇಟ್ಟುಕೊಳ್ಳಬೇಕೇ? ಗೋಡೆಗೆ ಕರಪತ್ರಗಳನ್ನು ಹಚ್ಚಬೇಕೇ?? ಎಲ್ಲ ಮುನ್ನಡೆಯ ದಿನಪತ್ರಿಕೆ ಮತ್ತು ಮಾಸಪತ್ರಿಕೆಗಳಲ್ಲಿ ದೊಡ್ಡ ಜಾಹಿರಾತಾನ್ನು ಕೊಡಬೇಕೇ? ಅಥವಾ ಬಿ.ಸಿ. ಸಮಾನ ವಾದುದನ್ನು ಮಾಡಬೇಕೋ: ಓಣಿಗಳು ಮತ್ತು ಹಳ್ಳಿಗಳ ಮೂಲಕ ದೇವರ ಸಂದೇಶವನ್ನು ಸಾರಬೇಕೋ? (ಯೋನನು ನಿನವೆಯಲ್ಲಿ ನಂತರದಲ್ಲಿ ಮಾಡಿದಂತೆಯೇ ಆತನು ತನ್ನ ಉತ್ತಮವಾದ ವಿನಾಶ ಮತ್ತು ಕತ್ತಲೆಯ ಸಂದೇಶವನ್ನು ಚೆನ್ನಾಗಿಯೇ ಸಿದ್ಧಮಾಡಿರಬಹುದು: ಓಣಿಗಳ ಮೇಲಕ್ಕೂ ಕೆಳಕ್ಕೂ ಹೋಗಿ "ಪಶ್ಚಾತ್ತಾಪ ಪಡಿ" ಎಂದು ಕೂಗಿರಬಹುದು.) ಇದು ಯೋಗ್ಯವಾದಂತೆ ಕಾಣುತ್ತದೆ. ತಿರುಗಿ, ದೇವರು ಹೀಗೆ ಹೇಳುತ್ತಾನೆ, "ನನ್ನ ಮಾರ್ಗಗಳು ನಿನ್ನ ಮಾರ್ಗಗಳಲ್ಲ."

ಎರಡನೇಯ ಹೆಜ್ಜೆ ಯಾವುದು? 3 ಮತ್ತು 4 ವಚನಗಳನ್ನು ಕೇಳಿರಿ:

> "ನೀನು ಈ ಸ್ಥಳವನ್ನು ಬಿಟ್ಟು ಪೂರ್ವದಿಕ್ಕಿಗೆ ಹೋಗಿ ಯೋರ್ದನ ಹೊಳೆಯ ಆಚೆಯಲ್ಲಿರುವ ಕೆರೀತ್ ಹಳ್ಳದಲ್ಲಿ ಅಡಗಿಕೋ ಆ ಹಳ್ಳದ ನೀರು ನಿನಗೆ ಪಾನವಾಗಿ ರುವದು; ನಿನಗೆ ಆಹಾರ ತಂದುಕೊಡಬೇಕೆಂದು ಕಾಗೆಗಳಿಗೆ[1] ಆಜ್ಞಾಪಿಸಿದ್ದೇನೆ ಎಂದು ಹೇಳಿದನು."

ನಾನೇ ಎಲೀಯನಾಗಿದ್ದರೆ ನಾನು ಹೇಗೆ ಪ್ರತಿಕ್ರಯಿಸಬಹುದೆಂದು ನಾನು ಊಹಿಸಿಕೊಳ್ಳಬಲ್ಲೆ. "ಸಂಗತಿಗಳು ಸಹಜವಾಗಿರುವವರೆಗೆ ಕ್ಷಣಮಾತ್ರದ ಸಮಯ

ನೀನು ಹೊಗಿರಬೇಕೆಂದು ನಾನು ಬಯಸುವವನಾಗಿದ್ದೇನೆ. ನಿನ್ನನ್ನು ನಾನು ಒಂದು ಕ್ಷಣ ಮುಚ್ಚಿಡುತ್ತೇನೆ" ಎಂದು ಹೇಳಿದ್ದಾರೆ.

ನಾನು ಹೀಗೆ ಉತ್ತರಿಸುತ್ತೇನೆ. "ಓಹ್, ಎಲ್ಲಿ? ಮನೆಯಲ್ಲಿ? ಗುಡಾರದಲ್ಲಿಯೋ? ಎಲ್ಲಿ?"

"ನನ್ನ ಮನದಲ್ಲಿರುವುದೇನೆಂದರೆ ಅದೊಂದು *ಕೊಳ್ಳ.*"

"ಕೊಳ್ಳವೇ? ... ನಾನು ನಿರ್ವಹಿಸಬಲ್ಲೆ. ನಾನು ಮೊದಲಿಗಿಂತಲೂ ಕಠಿಣವಾಗಿರುವೆ."

"ನೀನು ನಿನಗೆ ಬೇಕಾದ ನೀರನ್ನು ಕೊಳ್ಳದಿಂದ ಪಡೆದುಕೊಳ್ಳಬಹುದು."

"ಅದಾಗಬಹುದು. ಊಟದ ಬಗೆಗೆ ಹೇಗೆ? ನಾನು ಊರಿನಿಂದ ಹೊರಗಿರ ಬೇಕೇ?"

"ಇಲ್ಲ, ನಿನಗೆ ಆಹಾರ ಒದಗಿಸುವವರು ಇದ್ದಾರೆ."

"ಆಹಾರ ಒದಗಿಸುವವರೇ? ಸಮಾರ್ಯದ ಹಯತ್ - ಹಿಲ್ಟನ್ ಎಂಬುವರೇ?"[2]

"ಇಲ್ಲ, ಕಾಗೆಗಳು, ಕಾಗೆಗಳು ಮುಂಜಾನೆ ಮತ್ತು ಸಾಯಂಕಾಲ ನಿನಗೆ ರೊಟ್ಟಿ ಮತ್ತು ಮಾಂಸವನ್ನು ಒದಗಿಸುವವು."

"ಕಾಗೆಗಳೇ? ಹೊಲಸು ಕಾಗೆಗಳು? ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಅವು ಅಶುದ್ಧ ಪಕ್ಷಿಗಳಲ್ಲವೇ? ಅವುಗಳು ತಮ್ಮ ಹೊಲಸಾದ ಚುಂಚಿನಿಂದ ಮತ್ತು ಹೊಲಸಾದ ಪಾದಗಳಿಂದ ನನ್ನ ಆಹಾರವನ್ನು ತರುವವೇ?"

"ಹೌದು!" ಎಂದು ದೇವರು ಹೇಳಿದನು.

ನೀನು ಮತ್ತು ನಾನು ನಮ್ಮ ಇಸ್ರಾಯೇಲಿನ ಮನುಷ್ಯನನ್ನು ಕಾಳಜಿ ತೆಗೆದುಕೊಳ್ಳುವ ರೀತಿ ಇದೆಯಾ? ಬಹುಶಃ ಇಲ್ಲ - ಆದರೆ ದೇವರ ಮಾರ್ಗಗಳು ನಮ್ಮ ಮಾರ್ಗಗಳಲ್ಲ.

ಪ್ರತಿಯೊಬ್ಬರಂತೆ, ಇಸ್ರಾಯೇಲಿನಲ್ಲಿನ ದೇವರ ಮನುಷ್ಯನಿಗೆ ರಕ್ಷಣೆ ಮತ್ತು ಆಹಾರದ ಅವಶ್ಯಕತೆಯಿದೆ, ಆದರೆ ಮಾನವನು ಯೋಚಿಸುವ ರೀತಿಯಲ್ಲಿ ಆತನೂ ಮಾಡಬೇಕೆಂಬುದು ಅವಶ್ಯವಿಲ್ಲ. ಒಂದು ವೇಳೆ ದೇವರ ನಂಬಿಗಸ್ತ ಮಗ ನಾಗಿದ್ದದ್ದಾದರೆ ದೇವರು ಮುಂಜಾಗ್ರತೆಯಿಂದಲೇ ರಕ್ಷಣೆ ಮತ್ತು ಆಹಾರವನ್ನು ಒದಗಿಸುವವನಾಗಿದ್ದಾನೆ, ಆದರೆ ಆ ಆಶೀರ್ವಾದಗಳು ಕ್ಷುಲ್ಲಕವಾದ ಹೊಳೆಯ ಮತ್ತು ಹೊಲಸಾದ ಪಕ್ಷಿಯಂತೆ ರೂಪ ಬದಲಾಯಿಸಿಕೊಂಡು ಬಂದವು.

ಈಗ ವಚನ 5ರ ಮೊದಲ ಭಾಗವನ್ನು ಗಮನಿಸಿರಿ: "ಅವನು ಯೆಹೋವನ ಅಪ್ಪಣೆಯಂತೆ ಯೋರ್ಧನಿನ ಪೂರ್ವಕ್ಕಿರುವ ಕೆರೀತ್ ಹಳ್ಳದಲ್ಲಿ ವಾಸಿಸಿದನು." ಇದು ಸುಂದರವಾದುದಲ್ಲವೇ? ದೇವರು ಹೇಳಿದೊಡನೆ, ಎಲೀಯನು ಆತನೇನು ಹೇಳಿದನೋ ಅದನ್ನೇ ಮಾಡಿದನು. ಈ ಪಾಠದಿಂದ ಜಗತ್ತು ಈ ದಿನ ಎಂಥದನ್ನು ಕಲಿಯುವದು ಅವಶ್ಯವಿದೆ! ದೇವರು ಮಾತನಾಡಿದಾಗ ಅದೆ ಆತನಿಗೆ ಸಂಪೂರ್ಣವಾದ ಸೂಚನೆಯಾಗಿತ್ತು. ಇದು ನನಗೆ ತಿಳಿದದ್ದಾಗರಲಿ, ಅಥವಾ ನನಗೆ ತಿಳಿಯದ್ದಾಗಿರಲಿ, ಅದು ಮುಖ್ಯ ಸಂಗತಿಯಲ್ಲ. ಮುಖ್ಯವಾದ ಸಂಗತಿ ಎಂದರೆ ದೇವರು ಹೇಳಿದನು ಎಂಬುದು. ನನಗೆ ಇಷ್ಟೇ ಒಳ್ಳೆಯದು ಸಾಕು; ನಾನು ಇದನ್ನು ಮಾಡುವೆ!

> ಹೀಗೆ ಆತನು ಯೋರ್ಧನಿನ ಪೂರ್ವಕ್ಕಿರುವ ಕೆರೀತ್ ಹಳ್ಳದಲ್ಲಿ ವಾಸಿಸಿದನು. ಕಾಗೆಗಳು ಅವನಿಗೆ ಪ್ರಾತಃ ಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ರೊಟ್ಟಿ, ಮಾಂಸ ಇವುಗಳನ್ನು ತಂದುಕೊಡುತ್ತಿದ್ದವು. ಅವನು ಇವುಗಳನ್ನು ತಿನ್ನುತ್ತಿದ್ದನು; ಹಳ್ಳದ ನೀರು ಅವನಿಗೆ ಪಾನವಾಗಿತ್ತು (ವಚನಗಳು 5, 6).

ಕೆರಿತ್ ಹಳ್ಳವು "ಯೋರ್ದನಿನ ಪೂರ್ವದಲ್ಲಿದೆ"[3] ಎಂಬುದನ್ನು ಬಿಟ್ಟರೆ ಕೆರೀತ್ ಹಳ್ಳ ಎಲ್ಲಿದೆ ಎಂಬುದು ನಮಗೆ ತಿಳಿಯದು, ಸಾಮಾನ್ಯವಾಗಿ ಅದು ಎಲೀಯನು ಬೆಳದ ಬಂದಂಥ

ಸ್ಥಳವಾಗಿರರಬಹುದು.

ಈ ಪರಿಚ್ಛೇದವು ಎಲೀಯನು ಕೆರೀತ್ ಹಳ್ಳದಲ್ಲಿ ವಾಸಿಸಲು ಹೋದನು ಎಂದು ಹೇಳುತ್ತದೆ. ಕೆಲವು ದಿನಗಳವರೆಗೆ ಆತನು ಅಲ್ಲಿದ್ದನು. ಅದು ಕೆಲವು ತಿಂಗಳುಗಳ ವರೆಗೆ ಆತನ ಮನೆಯಾಗಿತ್ತು.

"ಕೆರಿತ್" ಎಂಬ ಪದದ ಅರ್ಥವು "ಕಡಿದು ಹಾಕು" ಅಥವಾ "ಬೇರೆಯಾಗು" ಎಂಬರ್ಥವನ್ನು ಹೊಂದಿದೆ. ಇದು ನಮ್ಮ ಕಥೆಗೆ ಸರಿಯಾಗಿ ಹೊಂದುವಂತದ್ದಾಗಿದೆ, ಎಲೀಯನು ಅನೇಕ ದಿನಗಳವರೆಗೆ, ಬಿರುಸಾದ ಬೇಸಿಗೆಯಲ್ಲಿ, ಚಳಿಯಿಂದ ಜಡವಾದ ಮಳೆಯಲ್ಲಿ, ಮಂಜುಗಡ್ಡೆಯಂತಹ ಚಳಿಯಲ್ಲಿ, ಅಲ್ಹಾದಕವಾದ ವಸಂತಕಾಲದಲ್ಲಿ ಆತನು ಎಲ್ಲರಿಂದಲೂ ಬೇರೆಯಾದನು. ಕಣಿವೆ ಬದಿಗಳು ಆತನ ಮನೆ ಗೋಡೆಗಳಾಗಿದ್ದವು, ಆಕಾಶವು ಆತನ ಮಾಳಿಗೆಯಾಗಿತ್ತು, ಹುಲ್ಲು ಆತನ ಹಾಸಿಗೆಯಾಗಿತ್ತು ಮತ್ತು ಆತನ ಕಂಬಳಿ ಆತನ ಹೊದಿಕೆಯಾಗಿತ್ತು.

ಎಲೀಯನು ಅಲ್ಲಿ ಎಷ್ಟು ದಿನಗಳವರೆಗೆ ಇದ್ದನೋ ಎಂಬುದು ನಮಗೆ ಖಚಿತವಾಗಿ ತಿಳಿಯದು. ಆತನು ಅಲ್ಲಿ ಮೂರುವರೆ ವರ್ಷಗಳವರೆಗೂ ಅಡಗಿಕೊಂಡಿದ್ದನು. 1 ಅರಸು 18:1ರಲ್ಲಿ ಆತನು ಚಾರೆಪ್ತಾದಲ್ಲಿ ಎರಡು ವರ್ಷಗಳಿಂಗಿಂತಲೂ ಹೆಚ್ಚಾಗಿ ಅಲ್ಲಿದ್ದನು ಎಂಬುದಕ್ಕೆ ಕೆಲ ಸೂಚನೆಗಳು ದೊರೆಯುತ್ತದೆ. ಹಾಗಿದ್ದಾದರೆ, ಆತನು ಕೆರೀತ್‌ನಲ್ಲಿ ಒಂದಕ್ಕಿಂತ ಹೆಚ್ಚು ವರ್ಷ ಅಲ್ಲಿದ್ದನು ಎನ್ನಬಹುದು.

ಅದರ ಬಗ್ಗೆ ವಿಚಾರ ಮಾಡುವುದನ್ನು ನಿಲ್ಲಿಸಿ. ಇಲ್ಲಿ ಒಬ್ಬ ಚಟುವಟಿಕೆಯುಳ್ಳ ಮನುಷ್ಯನು, ಒಂದು ವರ್ಷದವರೆಗೆ ಯಾವುದೇ ಚಟುವಟಿಕೆಯಿಲ್ಲದೇ ಇರುವ ಹಾಗೆ ಒತ್ತಾಯಿಸಲ್ಪಟ್ಟನು. ಅದು ಕಷ್ಟದಾಯಕವಾದುದು ಎಂಬುದು ನಿಮಗನಿಸದೇ? ಇದು ನಮಗೂ ಕಷ್ಟದಾಯಕವಾದದ್ದು. ನಮಗೆ ನಮ್ಮ ಕೆಲಸದಿಂದ ಒಂದು ವರ್ಷ ಅಥವಾ ವರ್ಷಗಳವರೆಗೆ ದೂರವಿರ ಬಯಸುವೆವು ಎಂದು ನಾವು ಹೇಳಿದ್ದಾದರೆ, ಆದರೆ ನಾವು ಏನೂ ಮಾಡದೇ ಕೆಲ ದಿನಗಳವರೆಗೆ ದೂರವಿರುವುದಾದರೆ, ನಾವು ರೇಗುವವರೂ, ಮುಂಗೋಪ ವುಳ್ಳವರೂ, ಕೆಲಸಕ್ಕೆ ಮರಳಲು ಸಿದ್ಧರಾಗುವವರೂ ಆಗಿರುತ್ತೇವೆ. ನಮಗೆ ಒಂದು ಅಥವಾ ಎರಡು ತಿಂಗಳು ಹಾಸಿಗೆಯ ಮೇಲಿರಲು ನಮಗೆ ಹೇಳಲ್ಪಡ ಬಹುದು, ಆದರೆ ಕಾಯಿಲೆಯ ಕಾರಣದಿಂದ ಕೆಲದಿನಗಳವರೆಗೆ ಹಾಸಿಗೆಯ ಮೇಲೆ ಇರಲು ಒತ್ತಾಯಿಸಿದ್ದಾದರೆ, ನಾವು ಬೇಗನೇ ಎದ್ದೇಳಲು ಬಯಸುವವರಾಗಿದ್ದೇವೆ. ನಾವು "ಕಾರ್ಯ ಮಾಡುವ" ಜನರಾಗಿದ್ದೇವೆ; ನಾವು ಕಾರ್ಯಹೀನರಾಗುವುದಕ್ಕೆ ಒತ್ತಾಯಿಸುವುದನ್ನು ದ್ವೇಷಿಸುವವರಾಗಿದ್ದೇವೆ. ಕೆಲಸಾರಿ, ಅದು ನಮ್ಮನ್ನು ನಮ್ಮ ಕಾಯಿಲೆಯ ಕಾರಣದಿಂದ, ನಿವೃತ್ತಿಯ ಕಾರಣದಿಂದ, ಅಥವಾ ಕೆಲಸವನ್ನು ಬದಲಾಯಿಸುತ್ತಾ ಇರುವ ಕಾರಣದಿಂದ ಒತ್ತಾಯಿಸುವುದಾಗಿದೆ. ಈ ಸ್ಥಿತಿಗಳು ಕಠಿಣದಾಯಕವಾದವುಗಳು, ಆದರೆ ದೇವರ ಮಾರ್ಗಗಳಲ್ಲ. ದೇವರ ಏರ್ಪಾಡುಗಳು ನಮ್ಮ ಏರ್ಪಾಡುಗಳಲ್ಲ. ದೇವರ ವೇಳಾಪಟ್ಟಿಯು ನಮ್ಮ ವೇಳಾಪಟ್ಟಿಯಲ್ಲ.

ಆ ಸಮಯಗಳಲ್ಲಿ ಕಣಿವೆಯ ಬಳಿಯಲ್ಲಿ ನಾವು ಕೆಲ ಸಮಯ ಕಳೆಯುವದು ಮತ್ತು ಬೇರೆಯಾಗುವದು, ಕಡಿದು ಹಾಕಲ್ಪಡುವದು ಮತ್ತು ಕ್ರಿಯಾಶೂನ್ಯವಾಗುವದು ಆತನ ಚಿತ್ತವೇ ಆಗಿರಬಹುದು. ಇದು ಬದಲು ಸರಳವಾದುದಲ್ಲ, ಆದರೆ ಇದು ದೇವರ ಚಿತ್ತವಾಗಿದ್ದಾದರೆ, ಆಗ ಅದು ನಮ್ಮ ಒಳ್ಳೇಯತನಕ್ಕೆ. ಅದನ್ನು ಒಪ್ಪಿಕೊಳ್ಳುವುದನ್ನು ಕಲಿಯುವದು ನಮಗೆ ಅವಶ್ಯವಿದೆ, ನಿಶ್ಚಿಂತರಾಗಿರಿ, ಮತ್ತು ಅನುಭವದಿಂದ ಹೆಚ್ಚಿನದನ್ನು ಕಲಿಯಿರಿ.

ಕೆರೀತ್ ಹಳ್ಳದ ಬಗ್ಗೆ ನಾನು ಹೆಚ್ಚಾಗಿ ತಿಳಿದು ಕೊಳ್ಳಬೇಕೆಂದು ಎಂದು ಆಶಿಸುವವನಾಗಿದ್ದೇನೆ. ಎಲೀಯನ ಆ ದಿನಗಳಲ್ಲಿ, ವಾರಗಳಲ್ಲಿ, ಮತ್ತು ತಿಂಗಳುಗಳಲ್ಲಿ ಕೆರೀತ್ ಹಳ್ಳದಲ್ಲಿ ಆತನು ಪ್ರಾರ್ಥಿಸುತ್ತಿರುವಂತೆ ಮತ್ತು ದೇವರ ಬಗೆಗೆ ಯೋಚಿಸುತ್ತಿರುವಂತೆ ಆತ್ಮೀಕವಾಗಿ ಹೆಚ್ಚಾಗಿ ಬೆಳೆದನು ಎಂಬುದು ನನ್ನ ಊಹೆಯಾಗಿದೆ. ಬೈಬಲ್ ಅದರ ಬಗೆಗೆ

ಹೆಚ್ಚಿನ ವಿವರಗಳನ್ನೇನೂ ಕೊಟ್ಟಿಲ್ಲ. ಬದಲಾಗಿ ಅದು ಹೇಳುವಂತೆ ಎಲೀಯನು ದೇವರ ಸನ್ನಿಧಾನದಲ್ಲಿ *ನಿಂತುಕೊಂಡನು* (ವಚನ 1) ಮತ್ತು ದೇವರು ಹೇಳಿದುದ್ದನ್ನು ಮಾಡಿದನು (ವಚನ 5).

ಈಗ ನಾವು ಈ ಕಥೆಯ ವಿಚಿತ್ರವಾದ ಭಾಗದ ವಿಭಾಗಕ್ಕೆ ಬಂದಿದ್ದೇವೆ. ಅಲ್ಲಿ ಎಲೀಯನು ದೇವರು ತನಗೆ ಏನು ಹೇಳಿದನೋ ಅದನ್ನೇ, ದೇವರು ಹೇಳಿದ ಸ್ಥಳದಲ್ಲಿಯೇ ಮಾಡುತ್ತಿದ್ದಾನೆ ... *ಮತ್ತು ನೀರು ನಿಂತುಹೋಯಿತು.* "ದೇಶದಲ್ಲಿ ಮಳೆಯಿಲ್ಲದ್ದರಿಂದ ಕೆಲವು ದಿವಸಗಳ ನಂತರ ಹಳ್ಳವು ಬತ್ತಿ ಹೋಯಿತು" (ವಚನ 7).

ಆ ಚಿತ್ರಣ ನಿಮಗೆ ಸಿಕ್ಕಿತಾ? ಹಳ್ಳಗಳು ರಾತ್ರಿಯೆಲ್ಲಾ ಒಣಗಿರಲಾರವು. ಅವುಗಳು ಒಣಗಲು ದಿನಗಳು ಬಹುಶಃ ವಾರಗಳೇ ಹಿಡಿಯುತ್ತದೆ. ಒಂದು ದಿನ ಎಲೀಯನು ಹಳ್ಳದ ಹತ್ತಿರ ನೀರು ಕುಡಿಯಲು ಹೋದಾಗ ಎಲ್ಲಿ ಏನೂ ದೋಷವಿದೆ ಎಂದು ಆತನಿಗೆ ಭಾಸವಾಯಿತು, ಅದು ಏನೆಂದು ಆತನಿಗೆ ಸರಿಯಾಗಿ ತಿಳಿಯಲಿಲ್ಲ. ಮರುದಿನ, ಆತನು "ಅದು ಕೇವಲ ನನ್ನ ಊಹೆಯಿರಬೇಕು, ಆದರೆ ಹಳ್ಳವು ಅಷ್ಟೊಂದು ಆಳವಾ ದಂತೆಯೂ ಶಾಂತವಾದಂತೆಯೂ ನನಗೆ ಕಾಣದು" ಎಂದು ಆತನು ಯೋಚಿಸಿದನು. ಮರುದಿನ ಆತನಿಗೆ ಖಚಿತವಾಯಿತು "ಇದು ಕೇವಲ ನನ್ನ ಊಹೆಯಲ್ಲ. ಈ ಹಳ್ಳವು ಒಣಗುತ್ತಿದೆ!"

ಹಳ್ಳವು ದಿನದಿಂದ ದಿನಕ್ಕೆ ಚಿಕ್ಕದು ಮತ್ತು ಚಿಕ್ಕದು ಆಗುವುದನ್ನು ಮತ್ತು ಜಡವಾ ಗುತ್ತಿರುವುದನ್ನು, ಕೊಳೆಯಾದ ಬುಗ್ಗೆಯಾಗುತ್ತಿತ್ತು. ಅದು ಎಷ್ಟು ಚಿಕ್ಕದೆಂದರೆ ಚಿಕ್ಕ ಪಕ್ಷಿಗಳು ಮತ್ತು ಪ್ರಾಣಿಗಳು ಅದನ್ನು ಬಿಟ್ಟುಹೋಗುವ ಮಟ್ಟಿಗೆ, ಮತ್ತು ಚಿಕ್ಕ ಹೊಂಡದಲ್ಲಿ ಸಾಯುತ್ತಿರುವ ಮೀನುಗಳು ನೇತಾಡುತ್ತಿರುವಂತೆ, ಅಂತಿಮವಾಗಿ ನಿಂತು ನಾರುತ್ತಿರುವ ಕೆಲವೇ ಕೆಲವು ಹನಿಗಳು ಬಿರುಕು ಬಿದ್ದ ನೆಲದಲ್ಲಿ ಉಳಿದಿದ್ದವು.

ಎಲ್ಲಾ ಸಮಯದಲ್ಲಿ ಮುಂದಿನದೇನು ಎಂದು ಎಲೀಯನಿಗೆ ತಿಳಿದಿರುತ್ತಿರಲಿಲ್ಲ! ಈ ಮಾತನ್ನು ನಿಮ್ಮ ಗಮನದಲ್ಲಿಟ್ಟುಕೊಳ್ಳಿರಿ. ಹಳ್ಳವು ಒಣದಾಗುವವರೆಗೂ ಮೂರನೆಯ ಹೆಜ್ಜೆ ಪ್ರಕಟಿಸಲಾಗಿರಲಿಲ್ಲ. 8ನೇಯ ವಚನವನ್ನು ಗಮನಿಸಿರಿ: "ಆಗ ಯೆಹೋವನು ಅವನಿಗೆ ಇಂತೆಂದನು."

ಇದು ನಂಬಿಕೆಯ ಎಂಥಾ ಪರೀಕ್ಷೆ! ಎಲೀಯನ ಮೊದಲ ಪರೀಕ್ಷೆ "ಒಬ್ಬಂಟಿಯಾಗಿ ನಿಲ್ಲು" ಎಂಬುದು. ಆತನ ಎರಡನೆಯ ಪರೀಕ್ಷೆಯು "ಉಚಿತವಲ್ಲವೆನಿಸಿದರೂ ಪ್ರಶ್ನೆಯಿಲ್ಲದೇ ವಿಧೇಯನಾಗು." ಅದು ಬಲು ಕಠಿಣಮಯವಾದದ್ದು. ಆತನ ಮೂರನೇಯ ಪರೀಕ್ಷೆಯು ಎಲ್ಲಕ್ಕಿಂತಲೂ ಬಲು ಕಠಿಣಮಯವಾದುದ್ದು: ಆತನು ದೇವರು ಎಲ್ಲಿ ಇರು ಎಂದಿದ್ದಾನೋ ಅಲ್ಲಿದ್ದಾನೆ, ಮತ್ತು ದೇವರು ಏನು ಬಯಸುವವನಾಗಿದ್ದಾನೋ ಅದನ್ನು ಮಾಡುತ್ತಿದ್ದಾನೆ ಮತ್ತು ಹಳ್ಳವು ಒಣಗಿದೆ!

ನೀನು ಅಲ್ಲಿ ಇರಬೇಕಿತ್ತು, ನೀನು ಅಲ್ಲಿದ್ದಿ ಎಂದು ನಾನು ಬಲ್ಲೆನು. ಒಂದು ಸಾರಿ ನೀವು ಒಳ್ಳೇಯ ಆರೋಗ್ಯವನ್ನು, ಗಟ್ಟಿಮುಟ್ಟಾದ ದೇಹವನ್ನು, ಒಳ್ಳೇಯ ಮನಸ್ಸನ್ನು ಹೊಂದಿದ್ದೀರಿ - ಆದರೆ ನಿಮ್ಮ ಹಳ್ಳ ಒಣಗಿಹೋಗಿದೆ. ನೀವು ನಿಮ್ಮ ಮಕ್ಕಳನ್ನು ನಿಮ್ಮಿಂದ ಸಾಧ್ಯವಾದಷ್ಟು ಕರ್ತನ ಭಯದಲ್ಲಿ ಒಳ್ಳೇಯ ರೀತಿಯಲ್ಲಿ ಬೆಳಸುತ್ತೀರಿ ಮತ್ತು ನೀವು ಒಳ್ಳೇಯ ಕೆಲಸವನ್ನೇ ಮಾಡಿದ್ದಿರೆಂದು ನೆನಿಸುತ್ತೀರಿ - ಆದರೆ ಆಗ ನಿಮ್ಮ ಹಳ್ಳವು ಬತ್ತಿಹೋಗಿರುತ್ತದೆ.

ಎಲೀಯನು ಇದನ್ನು ಮಾಡಲಿಲ್ಲ, ಆದರೆ ಆತನು "ಕರ್ತನೇ ಕೆರೀತ್ ಹಳ್ಳದ ನೀರನ್ನು ಯಾಕೆ ನಿಲ್ಲಿಸಿದ್ದಿ?" ಎಂದು ಅತ್ತಿರಬೇಕು ನಾವು ಊಹಿಸಿಕೊಳ್ಳುವಾ. ಕರ್ತನಿಂದ ಬಂದ ಮೊದಲ ಉತ್ತರವು ಆಶ್ಚರ್ಯಕರವಾದುದ್ದು ಆಗಿರುತ್ತದೆ: "ಎಲೀಯ, ನೀನು ಪ್ರಾರ್ಥಿಸಿದ್ದರಿಂದ ನಾನು ಹಾಗೆ ಮಾಡಿದೆನು." ವೇದಭಾಗವನ್ನು ಗಮನಿಸಿರಿ: "ಹಳ್ಳವು ಒಣಗಿ ಹೋಗಿತ್ತು *ಯಾಕೆಂದರೆ ಎಲೀಯನು ಮಳೆ ಬರಬಾರದೆಂದು* ಬಹಳವಾಗಿ ಪ್ರಾರ್ಥಿಸಿದನು." ಆ ನೆಲದಲ್ಲಿ ಮಳೆಯು ಯಾಕೆ ಬೀಳಲಿಲ್ಲ? ಯಾಕೆಂದರೆ ಎಲೀಯನು ಪ್ರಾರ್ಥಿಸಿದ್ದರಿಂದಲೇ (ಯಾಕೋಬ 5:17).

ಯಾವಾಗಲೂ ಅಲ್ಲ ಕೆಲ ಸಾರಿ, ನಾವು ನೆನಸಿದ ರೀತಿಯಲ್ಲಿ ದೇವರು ಈ ರೀತಿ ಯಲ್ಲಿ ಉತ್ತರಿಸುವವನಾಗಿದ್ದಾನೆ. ನಾವು "ದೇವರೇ ನಮಗೆ ತಾಳ್ಮೆಯನ್ನು ಕೊಡು ಆದರೆ ಬಹಳ ಸಮಯವನ್ನು ತೆಗೆದುಕೊಳ್ಳಬೇಡ." ಅಥವಾ "ನಮಗೆ ನಂಬಿಕೆಯನ್ನು ಕೊಡು, ಆದರೆ ಬೈಬಲನ್ನು ಓದುವಂತೆ ಮಾಡಬೇಡ." ಅಥವಾ "ನನಗೆ ಬಲವನ್ನು ಕೊಡು ಆದರೆ ನಾನು ಕಷ್ಟಪಡುವಂತೆ ಮಾಡಬೇಡ" ಎಂದು ಪ್ರಾರ್ಥಿಸುವವರಾಗಿರುತ್ತೇವೆ. ಸಂಗತಿಗಳು ನಾವು ಯೋಜಿಸಿದ ರೀತಿಯಲ್ಲಿ ಯಾವಾಗಲೂ ಸಂಭವಿಸಲಾರವು. ದೇವರ ಮಾರ್ಗಗಳು ನಮ್ಮ ಮಾರ್ಗಗಳಲ್ಲ.

ಎಲೀಯನಿಗೆ ದೇವರ ಸಂಪೂರ್ಣ ಉತ್ತರವು ಹೀಗಿರಬಹುದು: ನೀರು ನಿಲ್ಲಿಸಿರುವುದಕ್ಕೆ ಕಾರಣ ಇದು ನನ್ನ ಎಲ್ಲ ಯೋಜನೆಗಳಿಗೆ ಮುಂದಿನ ಹೆಜ್ಜೆಯನ್ನು ತೆಗೆದುಕೊಳ್ಳಲು ಇರುವ ಸಮಯವಾಗಿದೆ. ಚಿಂತಿಸಬೇಡ; ನನ್ನನ್ನು ನಂಬು. ಎಲ್ಲವೂ ಸರಿಯಾಗಿಯೇ ಆಗುತ್ತದೆ.

## ಚಾರೆಪ್ತಾದಲ್ಲಿ ದೇವರು ನೀರನ್ನು ಯಾಕೆ ನಿಲ್ಲಿಸಿದನು (17:8-16)

ಇದು ನಮ್ಮನ್ನು ವೇದಭಾಗದ ಮೂರನೆಯ ಭಾಗಕ್ಕೆ ತರುವಂತದ್ದಾಗಿದ್ದು (1 ಅರಸು 17:8-16) ನಾವು ಈ ರೀತಿ ಹೇಳಿದದ್ದು, "ಚಾರೆಪ್ತಾದಲ್ಲಿ ದೇವರು ನೀರನ್ನು ಯಾಕೆ ನಿಲ್ಲಿಸಿದನು?"

> "ಆಗ ಯೆಹೋವನು ಅವನಿಗೆ ನೀನು ಇಲ್ಲಿಂದ ಚೀದೋನ್ಯರ ಚಾರೆಪ್ತಾ ಊರಿಗೆ ಹೊರಟು ಹೋಗಿ ಅಲ್ಲಿ ವಾಸಿಸು. ನಿನ್ನನ್ನು ಸಾಕಬೇಕೆಂದು ಅಲ್ಲಿನ ಒಬ್ಬ ವಿಧವೆಗೆ ಆಜ್ಞಾಪಿಸಿದ್ದೇನೆ ಅಂದನು" (ವಚನಗಳು 8, 9).

ಈ ಸಾರಿ ದೇವರೊಂದಿಗೆ ಊಹಾತ್ಮಕ ಸಂಭಾಷಣೆಯನ್ನು ಶೋಧನೆ ಮಾಡುವುದಿಲ್ಲ. ಬದಲಾಗಿ, ನೀನೇ ಎಲೀಯನೆಂದು ಊಹಿಸಿಕೊಂಡು ದೇವರೊಡನೆ ನೀನು ಹೊಂದಿರಬಹುದಾದ ಸಂಭಾಷಣೆಯನ್ನು ಕಲ್ಪನೆ ಮಾಡಿಕೊಳ್ಳಬೇಕೆಂದು ನಾನು ಆಶಿಸುವವನಾಗಿದ್ದೇನೆ. ಈ ಅಂಶಗಳನ್ನು ಮನದಲ್ಲಿ ಇಟ್ಟುಕೊಳ್ಳಿರಿ:

(1) ದೇವರಿಗೆ ಎಲೀಯನು ಅರಸನ ಬಳಿಗೆ ತಿರುಗಿ ಹೋಗಬೇಕು ಅಥವಾ ಹೋಗಿ ಸಾರಬೇಕು ಎನ್ನುವದೂ ಇನ್ನೂ ತಿರ್ಮಾನಿಸದೆ: ಎಲೀಯನು ಸ್ಥಳವನ್ನು ಬದಲಾಯಿಸಬೇಕೆ ನ್ನುವ ಆಶೆ ಮಾತ್ರ ಇತ್ತು. (2) ಪೂರ್ವಕ್ಕಿಂತ ಆಚೆ ಅನಾವೃಷ್ಟಿಗೆ ಸಿಕ್ಕ ಪ್ರದೇಶಕ್ಕೆ ಅವನು ಹೋಗುವುದು ದೇವರಿಗೆ ಬೇಕಿರಲಿಲ್ಲ. ಬದಲಾಗಿ ಅನಾವೃಷ್ಟಿಗೆ ಸಿಕ್ಕ ಪ್ರದೇಶಕ್ಕೆ ದಾಟಿ ಎಪ್ಪತ್ತೈದು ಅಥವಾ ನೂರು ಮೈಲಿ ಈಶಾನ್ಯಕ್ಕೆ ಎಲೀಯನು ಹೋಗ ಬೇಕೆಂದು ಆತನು ಬಯಸುವವನಾಗಿದ್ದನು. (3) ನೇರವಾಗಿ ಉತ್ತರ ಇಸ್ರಾಯೇಲ್ಯರ ಫೊಯನಿಕ ಪಟ್ಟಣದಲ್ಲಿನ ಚಿಕ್ಕದಾದ ಸಮುದ್ರ ತೀರದ ಚಾರೆಪ್ತಾಕ್ಕೆ ಆತನು ಹೋಗಬೇಕೆಂದು ದೇವರು ಬಯಸಿದ್ದನು. ಇದು ಇಜೆಬೇಲಳು ನಿರ್ಮಿಸಿದಂತ ಸಾಮಾನ್ಯವಾದ ಪ್ರದೇಶವಾಗಿತ್ತು! (4) ಎಲೀಯನು ಐಶ್ವರ್ಯವಂತನ ಅಹಲ್ಲಾದಕರವಾದ ಮನೆಯಲ್ಲಿ ವಾಸಿಸಲು ಏರ್ಪಾಟು ಮಾಡಿದನು.

ಈ ಸಂಗತಿಗಳನ್ನು ಒಟ್ಟಾಗಿ ಇಡಿರಿ, ಮತ್ತು ಇಲ್ಲಿ ನಿಮಗೆ "ಯಾಕೆ?" ಅಳುವ ಅವಕಾಶಗಳಿವೆ. ಹಾಗಿದ್ದದೇ ಆದರೇ, ಉತ್ತರವು ನಮಗೆ ತಿರುಗಿ ಬರುತ್ತದೆ: "ನನ್ನ ಮಾರ್ಗಗಳು ನಿನ್ನ ಮಾರ್ಗಗಳಲ್ಲ!"

ಎಲೀಯನು ಈ ಹೊಸ ಸೂಚನೆಗಳಿಗೆ ಹೇಗೆ ಪ್ರತಿಕ್ರಿಯಿಸಿದನು? ಆತನ ಮನದಲ್ಲಿ ಏಳುವ ಎಲ್ಲಾ ಪ್ರಶ್ನೆಗಳನ್ನು ಗಮನಿಸದೇ, ಆತನು ದೇವರು ಹೇಳಿದುದ್ದನ್ನು ಮಾಡಿದನು "ಅವನು ಅಲ್ಲಿಂದ ಹೊರಟು ಚಾರೆಪ್ತಾದ ಊರಬಾಗಿಲಿನ ಸಮೀಪಕ್ಕೆ ಬಂದನು" (ವಚನ 10).

"ಅವನು ಅಲ್ಲಿಂದ ಹೊರಟು ಚಾರೆಪ್ತಾದ ಊರಬಾಗಿಲಿನ ಸಮೀಪಕ್ಕೆ ಬಂದನು"

ಇಂಗ್ಲೀಷಿನ ಏಳು ಪದಗಳಲ್ಲಿ ಎಷ್ಟೊಂದು ಸಂಗತಿಗಳು ಅಡಗಿವೆ! ಈ ಪ್ರಯಾಣಕ್ಕಾಗಿ ಎಲೀಯನು ಅನೇಕ ದಿನಗಳನ್ನು ತೆಗೆದುಕೊಂಡಿರಬಹುದು. ಈ ಪ್ರದೇಶದ ಪ್ರಯಾಣದುದ್ದಕ್ಕೂ ಪ್ರತಿಯೊಬ್ಬರೂ ಆತನನ್ನು ಹುಡುಕುವಂತವರೂ ಆತನು ಬಲು ಭಯಗ್ರಸ್ತನೂ ದ್ವೇಷಿಸಲ್ಪಡುವ ಜೀವಿತ ವ್ಯಕ್ತಿಯೂ ಆತನು ಸುಲಭ ವಾಗಿ ಗುರ್ತಿಸಲ್ಪಡುವಂತವನೂ ಆಗಿದ್ದನು ಸೂರ್ಯನ ಪ್ರಕರತೆಯನ್ನು ದಿನದಿಂದ ತಗ್ಗಿಸದಂತಿರುವ, ಕಬ್ಬಿಣದಂತೆ ಕಠಿಣವಾದ ಭೂಮಿಯ ಜೊತೆ, ದೊಡ್ಡ ಕೊರಕುಲಗಳಿಂದ ತುಂಬಿದುದರಲ್ಲಿ ಪ್ರತಿಯೊಂದು ಹೆಜ್ಜೆಯಲ್ಲಿ ಧೂಳು ಏಳುತ್ತಿರುವುದರಲ್ಲಿ ಕಷ್ಟಕರವಾದ ಪ್ರಯಾಣವು ಇದಾಗಿತ್ತು. ಸಸ್ಯಗಳೇ ಇಲ್ಲದ ಭೂಮಿಯನ್ನು ಸತ್ತ ಪ್ರಾಣಿಗಳ ಒಣಗಿದ ಶವಗಳು ಬಿಳುಚಿದ ಎಲ್ಲವುಗಳ ಪ್ರದೇಶವನ್ನು ಆತನು ದಾಟಿಹೋಗ ಬೇಕಿತ್ತು. ಎಲೀಯನು ತನ್ನ ಪ್ರಯಾಣದಲ್ಲಿ ಯಾವುದೇ ಮನೆಗಳನ್ನು ಹಾದುಹೋಗಿದ್ದಾದರೆ ಹಸಿವೆಯಿಂದ ಕೂಡಿದ ಮತ್ತು ನೀರಡಿಸಿದ ಮಕ್ಕಳ ಅಳುವಿಗೆ ಆತನು ಎದುರಾಗುತ್ತಿದ್ದನು. ಈ ಎಲ್ಲವುಗಳು, "ಅವನ ಅಲ್ಲಿಂದ ಹೊರಟು ಚಾರೆಪ್ತಾದ ಊರಬಾಗಿಲಿನ ಸಮೀಪಕ್ಕೆ ಬಂದನು" ಎಂಬ ಏಳು ಮಾತಿನಲ್ಲಿ ಅಡಗಿವೆ.

ಅಂತೂ ಈ ಕಠಿಣವಾದ ಪ್ರಯಾಣವು ಸಂಪೂರ್ಣವಾಯಿತು ಮತ್ತು ಆತನು ಚಾರೆಪ್ತಾಕ್ಕೆ ಬಂದನು. ಅದು ಆತನು ಊಹಿಸಿದುದಕ್ಕಿಂತಲೂ ಕೆಟ್ಟದಾಗಿತ್ತು *ದೇವರು ಚಾರೆಪ್ತಾದಲ್ಲಿಯೂ ನೀರನ್ನು ನಿಲ್ಲಿಸಿಬಿಟ್ಟಿದ್ದನು* (ಗಮನಿಸಿ ವಚನ 14)!

ಆತನು ನೋಡಿದ ಮೊದಲ ಸಂಗತಿಯೆಂದರೆ ತನ್ನನ್ನು ನೋಡಿಕೊಳ್ಳಲು ದೇವರು ಸಿದ್ಧ ಮಾಡಿದ ವಿಧವೆಯನ್ನು ನೋಡಿದ್ದು. ಅವಳೇನು ಮಾಡುತ್ತಿದ್ದಳು? ಅವಳು ತನಗಾಗಿ ಮತ್ತು ತನ್ನ ಮಗನಿಗಾಗಿ ಕೊನೆಯ ಒಂದು ಊಟವನ್ನು ಸಿದ್ಧಮಾಡುವುದಕ್ಕಾಗಿ ಕಟ್ಟಿಗೆಯನ್ನು ಆರಿಸುತ್ತಿದ್ದಳು. ಈ ವಿಧವೆಗೆ ಏನೂ ಇರಲಿಲ್ಲ; ಅವಳು ಅತಿ ಬರದ ಪರಿಸ್ಥಿತಿಯಲ್ಲಿದ್ದಳು! ದೇವರ ಮಾರ್ಗಗಳು ನಮ್ಮ ಮಾರ್ಗಗಳಲ್ಲ!

ಉಳಿದ ಕಥೆಯನ್ನು ನೀವು ಬಲ್ಲವರಾಗಿದ್ದೀರಿ. ಎಲೀಯನು ಅವಳಿಗೆ ಕುಡಿಯಲು ಒಂದು ತುಂಬಿಗೆ ನೀರನ್ನು ಕೇಳುತ್ತಾನೆ ಅದನ್ನು ತರಲೆಂದು ಅವಳು ತಿರುಗಿದಾಗ, ಆತನು ಅವಳಿಗೆ "ಅವಳು ಅದನ್ನು ಅವನೊಡನೆ ಹಂಚಿಕೊಂಡಿದ್ದಾಳೆ ಇಸ್ರಾಯೇಲ್ ದೇವರಾದ ಯೆಹೋವನು ನಿನಗೆ ನಾನು ಈ ದೇಶಕ್ಕೆ ಮಳೆಯನ್ನು ಕಳುಹಿಸುವವರೆಗೆ ನಿನ್ನ ಮಡಕೆಯಲ್ಲಿರುವ ಹಿಟ್ಟು ತೀರುವುದಿಲ್ಲ, ಮೊಗೆಯಲ್ಲಿರುವ ಎಣ್ಣೆಯು ಮುಗಿದು ಹೋಗುದಿಲ್ಲ" (ವಚನ 14). ದೇವರು ಹೇಳುವುದನ್ನು ತಿಳಿಸುತ್ತಾನೆ. ಸರಿಯಾಗಿ ಇದೇ ರೀತಿಯಲ್ಲಿಯೇ ಸಂಭವಿಸಿತು.

ದೇವರು ಚಾರೆಪ್ತಾದಲ್ಲಿನ ನೀರನ್ನು ಏಕೆ ನಿಲ್ಲಿಸಿದನು?

ಈ ಕಾರಣಗಳಿರುವುದರಲ್ಲಿ ಸಂಶಯವೇ ಇಲ್ಲ: (1) ಯಾಕೆಂದರೆ ಇಸ್ರಾಯೇಲ್ಯರಿಗೆ ಕಷ್ಟಗಳು ಮೂಲತಃವಾಗಿ ಉತ್ತರದಿಂದಲೇ ಬರುತ್ತಿದ್ದವು ಮತ್ತು ಅವರೂ ಸಹ ಈ ಸಂಕಟಗಳನ್ನು ಎದುರಿಸಬೇಕೆಂದು ಇವು ಇರಿಸಲ್ಪಟ್ಟಿದ್ದವು, (2) ಎಲೀಯನ ಮೇಲೆ ಒತ್ತಡಗಳನ್ನು ನಿರಂತರವಾಗಿ ತರುವುದರ ಮೂಲಕ ಆತನು ದೇವರನ್ನೇ ಸಂಪೂರ್ಣವಾಗಿ ಆರಿತುಕೊಳ್ಳುವಂತಾಗಬೇಕು, ಮತ್ತು (3) ಆ ಬಡ ವಿಧವೆಗೆ ಯೆಹೋವನೊಬ್ಬನೇ ನಿಜವಾದ ದೇವರು ಎಂದು ತಿಳಿಸಿಕೊಡಬೇಕಾಗಿದ್ದರಿಂದಲೇ.

## ಮುಕ್ತಾಯ

ನಮ್ಮ ಜೀವನದಲ್ಲಿ ಏನೇ ಸಂಭವಿಸಿದರೂ ಕೂಡಾ ದೇವರು ನಮ್ಮನ್ನು ಮರೆತು ಬಿಡುವುದಿಲ್ಲ, ಆದರೆ ಆತನು ಇನ್ನೂ ನಮ್ಮನ್ನು ಪ್ರೀತಿಸುತ್ತಿದ್ದಾನೆ ಮತ್ತು ನಮ್ಮ ಕಡೆಗೆ ಗಮನಹರಿಸುತ್ತಿದ್ದಾನೆ ನಮ್ಮನ್ನು ಪೂರೆಯುತ್ತಿದ್ದಾನೆ ಮತ್ತು ಪೋಷಿಸುತ್ತಾ ಇದ್ದಾನೆ ಎಂಬುದನ್ನು ಅರಿಯುವದು ಎಂಥ ಪ್ರಮುಖವಾದ ಸಂಗತಿಯಲ್ಲವೇ.

ಕೆಲಸಾರಿ ಯೆಶಾಯ 49:14ರಲ್ಲಿನ "ಯೆಹೋವನು ನಮ್ಮನ್ನು ಕೈಬಿಟ್ಟಿದ್ದಾನೆ, ಕರ್ತನು

ನನ್ನನ್ನು ಮರೆತಿದ್ದಾನಲ್ಲಾ." ಎಂಬುದನ್ನು ನಾವು ಅನುಭವಿಸುವವರಾಗಿದ್ದೇವೆ. ಹಾಗಿದ್ದಾದರೆ ಮುಂದಿನ ಎರಡು ವಚನಗಳನ್ನು ಲಕ್ಷಕೊಟ್ಟು ಕೇಳುವುದು ನಮಗೆ ಅವಶ್ಯವಿದೆ:

> "ಒಬ್ಬ ಹೆಂಗಸು ತಾನು ಹೆತ್ತ ಮಗುವಿನ ಮೇಲೆ ಕರುಣೆಯಿಡದೆ ತನ್ನ ಮೊಲೆ ಕೂಸನ್ನು ಮರೆತಾಳೆ? ಒಂದು ವೇಳೆ ಮರೆತಾಳು ನಾನು ನಿನ್ನನ್ನು ಮರೆಯೆ. ಇಗೋ, ನನ್ನ ಅಂಗೈಗಳಲ್ಲಿ ನಿನ್ನನ್ನು ಚಿತ್ರಿಸಿದ್ದೇನೆ. ನಿನ್ನ ಪೌಳಿಗೋಡೆಗಳು ಸದಾ ನನ್ನ ಕಣ್ಣೆದುರಿನಲ್ಲಿವೆ" (ವಚನಗಳು 15, 16).

"ನನ್ನ ಅಂಗೈಯಂತೆ ನಾನು ಇದನ್ನು ಮತ್ತು ಅದನ್ನು ತಿಳಿದಿದ್ದೇನೆ" ಎಂಬುವುದರಲ್ಲಿ ನಾವು ವಿವರಣೆಯನ್ನು ಪಡೆಯಬಹುದಾಗಿದೆ. ದೇವರು ಹೇಳುವುದೇನೆಂದರೆ "ನಾನು ನನ್ನ ಅಂಗೈಯನ್ನು ಬಲ್ಲ ಹಾಗೆ ನಿನ್ನನ್ನು ಬಲ್ಲೆನು. ನೀನು ಸಹಾ ನನ್ನ ಮನಸ್ಸಿನಲ್ಲಿ ಇದ್ದಿ, ಮತ್ತು ನಾನೆಂದಿಗೂ ನಿನ್ನನ್ನು ಮರೆಯೆನು!"

ಎಲೀಯನ ಅನುಭವದಿಂದ ನಾವು ಕೆಲಪಾಠಗಳನ್ನು ಇಲ್ಲಿ ಕಲಿಯಬಹುದಾಗಿದೆ:

(1) ನೀನು ತಿಳಿಯದಿದ್ದಾಗ್ಯೂ ಕೂಡಾ ದೇವರಿಗೆ ವಿಧೇಯನಾಗು.

(2) ನೀನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದಿದ್ದಾಗಲೂ ಕೂಡಾ ದೇವರಲ್ಲಿ ವಿಶ್ವಾಸವಿಡು.

(3) ನೀನು ಏನನ್ನು ಹೊಂದಲಿರುವಿ ಎಂಬುದು ನಿನಗೆ ತಿಳಿಯದಿದ್ದಾಗಲೂ ಕೂಡ, ನೀನು ಹೊಂದಿರುವುದಕ್ಕಾಗಿ ದೇವರಿಗೆ ಸ್ತೋತ್ರ ಹೇಳು. ದೇವರು ನಿನ್ನ ಅವಶ್ಯಕತೆಗಳನ್ನು ಬಲ್ಲವನಾಗಿದ್ದಾನೆ, ಮತ್ತು ಆತನನ್ನು ಪ್ರೀತಿಸುವವರ "(ಹಿತಕ್ಕಾಗಿ) ಒಳ್ಳೆಯದಕ್ಕಾಗಿಯೇ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ" (ರೋಮಾಪುರ 8:28).

---

ಟಿಪ್ಪಣಿಗಳು

[1]ಇದು ಇಬ್ರಿಯ ಪದವಾದ ("ravens") "ಕಾಗೆ" ಎಂಬುದರ ಭಾಷಾಂತರವೋ ಅಥವಾ ಮಾನವನ ನಿಯೋಗಿಗಳಾದಂತಹ "ವ್ಯಾಪಾರಿಗಳು" "ಅರಬಿಯನ್ನರು" ಎಂಬುದನ್ನು ಸೂಚಿಸುವಂತಹ ಪದವಾಗಿದೆಯೋ ಎಂಬುದರಲ್ಲಿ ಕೆಲ ಭಿನ್ನಾಭಿಪ್ರಾಯಗಳಿವೆ. ನಾವು ತಿಳಿದ ಪ್ರಕಾರ ಎಲ್ಲಾ ಭಾಷಾಂತರಗಳು ("ravens") "ಕಾಗೆ" ಎಂದೇ ಇವೆ. ಎಲೀಯನ ಕಥೆಯಲ್ಲಿ ಒಂದು ಅದ್ಭುತವಾದ ಸಂಗತಿ ಇದೆ ಎಂದು ಯಾರಾದರು ಒಪ್ಪುವುದಾದರೆ ಅದು ಇಬ್ರಿಯ ಭಾಷಾಂತರ ಪದವಾದ ("ravens") "ಕಾಗೆ" ಎಂಬುದರಲ್ಲದೆ ಮತ್ತೇನಿಲ್ಲ. [2]ಚಿರಪರಿಚಿತವಾದ ಸ್ಥಳಿಯ ಆಹಾರ ಒದಗಿಸುವವರಿಗೆ ಸಮಾನವಾದುದ್ದು. [3]ವಾಕ್ಯಭಾಗದಲ್ಲಿ "ಯೋರ್ದನ ಹೊಳೆಯ ಮುಂಚಿನಲ್ಲಿದೆ" ಎಂದಿದೆ. ಹಳೆಯಒಡಂಬಡಿಕೆಯಲ್ಲಿ ಸಾಮಾನ್ಯವಾದ ಇದು "ಯೋರ್ದನಿನ ಪೂರ್ವದಲ್ಲಿ" ಎಂಬರ್ಥವನ್ನು ಕೊಡುತ್ತದೆ. ಪಂಡಿತರು ಈ ಸ್ಥಳದ ಬಗೆಗೆ ಒಪ್ಪುವುದಿಲ್ಲ. ಒಬ್ಬ ಬರಹಗಾರರು ಹೇಳುವಂತೆ ಇದು "ಮೃತ್ಯು ಸಮುದ್ರದ ಉತ್ತರದಿಂದ ಕೆಲವು ಮೈಲಿಯಲ್ಲಿದೆ" ಮತ್ತು ಅದು "ಯೋರ್ದನಿನ ಪಶ್ಚಿಮದಲ್ಲಿ ಹರಿಯುತ್ತದೆ" ಎಂದು ಹೇಳುತ್ತಾರೆ.

---

## ಪಾಠದ ರೂಪರೇಖೆ

**ಪರಿಚಯ**

I. ದೇವರು ಇಸ್ರಾಯೇಲಿನಲ್ಲಿ ನೀರನ್ನು ಯಾಕೆ ನಿಲ್ಲಿಸಿದನು (17:1)?

A. ಇಸ್ರಾಯೇಲಿನಲ್ಲಿ ಏನು ಸಂಭವಿಸಿತು ಎಂಬುದನ್ನು ಪುನರಾವಲೋಕಿಸುವ.

1. ಧರ್ಮೋಪದೇಶಕಾಂಡದಲ್ಲಿನ ಎಚ್ಚರಿಕೆಯನ್ನು ಗಮನಿಸಿರಿ. 7:1-6ರಲ್ಲಿ ಅನ್ಯದೇಶಗಳೊಡನೆ ವಿವಾಹ ಸಂಬಂಧವನ್ನು ಇಟ್ಟುಕೊಳ್ಳಬಾರದು.

ಅಹಾಬನು ಈ ಎಚ್ಚರಿಕೆಯತ್ತ ಗಮನಕೊಡಲಿಲ್ಲ ಯಾಕೆಂದರೆ ಅಹಾಬನ ಪರವಾಗಿ ಇಜೆಬೇಲಳು ಇರುವುದರಿಂದ.

2. ತನ್ನ ಗದರಿಕೆಯನ್ನು ಹೊತ್ತುಕೊಂಡವರಿಗೆ ದೇವರು ಏನು ಮಾಡುತ್ತಾನೆ? ಆತನು ಎಲೀಯನನ್ನು ಆಹಾಬನ ಹತ್ತಿರ ಕಳುಹಿಸಿದನು: 1 ಅರಸು 17:1. "ವರ್ಷಗಳು" ಎಂಬ ಪದಗಳನ್ನು ಗಮನಿಸಿರಿ; ಮೂರುವರೆ ವರ್ಷಗಳ ವರೆಗೆ ಮಳೆಯು ಬರುವುದಿಲ್ಲ (ಲೂಕ 4:25; ಯಾಕೋಬ 5:17).

B. ದೇವರು ಇಸ್ರಾಯೇಲಿನಲ್ಲಿ ನೀರನ್ನು *ಯಾಕೆ* ನಿಲ್ಲಿಸಿದನು?

1. ದೇವರ ಎಚ್ಚರಿಕೆಯು (ಧರ್ಮೋಪದೇಶಕಾಂಡ 7) ಹಿಂಬಾಲಿಸು (ಧರ್ಮೋಪದೇಶಕಾಂಡ 11:16, 17). ಎಲೀಯನು ಮಳೆಯು ಬಾರದಂತೆ ಪ್ರಾರ್ಥಿಸಿದನು (ಯಾಕೋಬ 5:17). ಧರ್ಮೋಪದೇಶಕಾಂಡ 11ರಲ್ಲಿ ದೇವರು ಯಾವ ಎಚ್ಚರಿಕೆಯನ್ನು ಕೊಟ್ಟಿದ್ದಾನೆ ಎಂಬುದನ್ನು ಪುರಾವೆಗಳಿಂದ ಎಲೀಯನು ದೇವರಿಗೆ ಪ್ರಾರ್ಥಿಸಿದನು.

2. "ಯಾಕೆ?" ಎಂಬ ಪ್ರಶ್ನೆಗೆ ದೇವರು ಉತ್ತರಿಸಬಹುದು:

a. "ಜನರು ನನ್ನ ಮಾತಿಗೆ ಅವಿಧೇಯರಾದ ಕಾರಣ ಅವರು ಈ ಶಿಕ್ಷೆಗೆ ಅರ್ಹರಾಗಿದ್ದಾರೆ."

b. "ನನ್ನ ನಂಬಿಗಸ್ತನಾದ ಸೇವಕನು ಕಳಕಳಿಯಿಂದ ಪ್ರಾರ್ಥಿಸಿದ ಕಾರಣ."

c. "ನಾನೇ ದೇವರೆಂದು ತೋರಿಸುವ ಕಾರಣದಿಂದಲೇ; ನನ್ನ ಜನರು ತಮ್ಮ ಮಾರ್ಗದಲ್ಲಿ ಎಲ್ಲಿ ತಪ್ಪಿದ್ದಾರೆಂಬುದನ್ನು ತೋರಿಸಲೆಂದು ಮತ್ತು ಅವರು ಪಶ್ಚಾತ್ತಾಪಪಡಬೇಕು ಮತ್ತು ನನ್ನಡೆಗೆ ಹಿಂತಿರುಗಬೇಕು ಎಂಬ ಕಾರಣದಿಂದಲೇ."

II. ದೇವರು ಕೆರೀತ್ ಹಳ್ಳದಲ್ಲಿ ನೀರನ್ನು ಯಾಕೆ ನಿಲ್ಲಿಸಿದನು (17:2-7)?

A. ಅಹಾಬನಿಗೆ ಎಚ್ಚರಿಕೆಯನ್ನು ಕೊಟ್ಟನಂತರ, ದೇವರು ತನ್ನ ಯೋಜನೆಯಲ್ಲಿನ ಎರಡನೆಯ ಹೆಜ್ಜೆಯನ್ನು ಬಿಡುಗಡೆಮಾಡಿದನು.

1. ಎಲೀಯನಿಗೆ ಏನು ಮಾಡಬೇಕೆನ್ನುವದು ಒಂದು ಹೆಜ್ಜೆ ಒಂದೇ ಸಾರಿಯಂತೆ ಹೇಳಲ್ಪಟ್ಟಿತು.

2. ಎರಡನೆಯ ಹೆಜ್ಜೆಯು ಅನಿರೀಕ್ಷಿತವಾದದ್ದು: "ಕೆರೀತ್ ಹಳ್ಳದಲ್ಲಿ ಅಡಗಿಕೋ" (ವಚನಗಳು 3, 4).

3. ಎಲೀಯನು ದೇವರು ಹೇಳಿದಂತೆ ಮಾಡಿದನು (ವಚನಗಳು 5, 6).

a. "ಕೆರೀತ್" ಎಂಬ ಪದದ ಅರ್ಥವು "ಕಡಿದು ಹಾಕು" ಅಥವಾ "ಬೇರೆಯಾಗು" ಒಂದು ವರ್ಷ ಅದಕ್ಕಿಂತ ಹೆಚ್ಚಿನ ಸಮಯ ಹಳ್ಳದ ಬಳಿಯಲ್ಲಿ ಇರುವುದರ ಮೂಲಕ ಎಲೀಯನು ಇತರರಿಂದ ಬೇರೆಯಾಗಲ್ಪಟ್ಟನು!

b. ಈ ಸಮಯದಲ್ಲಿ ಕ್ರಿಯಾರಹಿತನಾಗಿರುವುದು ಎಲೀಯನಿಗೆ ಕಷ್ಟಕರವಾಗಿತ್ತು.

B. ನಂತರದಲ್ಲಿ ದೇವರು ಕೆರೀತ್‌ದಲ್ಲಿನ ನೀರನ್ನು ನಿಲ್ಲಿಸಿದನು!

1. ಎಲೀಯನು ದೇವರು ಅವನು ಎಲ್ಲಿರಬೇಕೆಂದು ಬಯಸಿದ್ದನೋ ಅಲ್ಲಿದ್ದನು, ಆದರೆ ನೀರು ನಿಂತುಹೋಗಿತು! (ವಚನ 7).

2. ದೇವರು ಕೆರೀತ್‌ದಲ್ಲಿ ನೀರನ್ನು ಯಾಕೆ ನಿಲ್ಲಿಸಿದನು?

a. ಎಲೀಯನು ಪ್ರಾರ್ಥಿಸಿದ್ದರಿಂದಲೇ (ವಚನ 7; ಯಾಕೋಬ 5:17). ಕೆಲ ಸಾರಿ ನಾವು ನೆನೆಸಿರದ ರೀತಿಯಲ್ಲಿ ದೇವರು ನಮ್ಮ ಪ್ರಶ್ನೆಗಳಿಗೆ ಉತ್ತರಿಸುತ್ತಾನೆ.

b. ಯಾಕೆಂದರೆ ಇದು ಎರಡನೆಯ ಹೆಜ್ಜೆಯ ಸಮಯವಾಗಿತ್ತು. ನಮಗೆ ದೇವರಲ್ಲಿ ಮತ್ತು ನಮ್ಮ ಜೀವಿತದಲ್ಲಿನ ಆತನ ಯೋಜನೆಗಳ ಮೇಲೆ ವಿಶ್ವಾಸವಿಡುವುದನ್ನು ಕಲಿಯುವದು ಅವಶ್ಯವಿದೆ.

III. ದೇವರು ಚಾರೆಪ್ತಾದಲ್ಲಿ ನೀರನ್ನು ಯಾಕೆ ನಿಲ್ಲಿಸಿದನು (17:8-16)?

A. ದೇವರು ಎಲೀಯನಿಗೆ ಚಾರೆಪ್ತಾಕ್ಕೆ ಹೋಗಲು ತಿಳಿಸಿದನು (ವಚನಗಳು 8, 9).

1. ಚಾರೆಪ್ತಾ ಉತ್ತರದ ಇಸ್ರಾಯೇಲಿನ ಫೋಯನಿಕ ಪಟ್ಟಣದಲ್ಲಿನ ಚಿಕ್ಕದಾದ ಸಮುದ್ರ ತೀರದ ಒಂದು ಊರಾಗಿತ್ತು. ಇದು ಎಲೀಯನು ಇರುವ ಸ್ಥಳದ ಈಶಾನ್ಯದಿಂದ 75 ರಿಂದ 100 ಮೈಲಿ ಅಂತರದಲ್ಲಿದ್ದು ಬರಪೀಡಿತ ಪ್ರದೇಶವನ್ನು ದಾಟಿ ಇತ್ತು. ಎಲೀಯನು ಇನ್ನೂ ತಿರುಗಿ ಕೆಳದರ್ಜೆಯಲ್ಲಿಯೇ ಇದ್ದಾನೆ. ಆತನು ವಿಧವೆಯ ಮನೆಯಲ್ಲಿ ವಾಸಿಸಿದನು.

2. ಎಲೀಯನು ಹೇಗೆ ಪ್ರತಿಕ್ರಿಯಿಸಿದನು? "ಆತನು ಎದ್ದು ಚಾರೆಪ್ತಕ್ಕೆ ಹೋದನು."

B. ಎಲೀಯನು ಅಲ್ಲಿಗೆ ಮುಟ್ಟಿದಾಗ ಅಲ್ಲಿಯೂ ನೀರು ನಿಂತುಹೋಗಿತ್ತು.

1. ಆತನು ಯಾರ ಜೊತೆ ವಾಸಿಸಲು ಬಂದಿದ್ದನೋ ಆ ವಿಧವೆ ಬರದಿಂದ ಸಾಯುತ್ತಿದ್ದಳು!

2. ದೇವರು ಚಾರೆಪ್ತಾದಲ್ಲಿನ ನೀರನ್ನು ಯಾಕೆ ನಿಲ್ಲಿಸಿದನು?

a. ಯಾಕೆಂದರೆ ಇಸ್ರಾಯೇಲ್ಯರಿಗೆ ಕಷ್ಟಗಳು ಮೂಲತಹವಾಗಿ ಉತ್ತರದಿಂದಲೇ ಬರುತ್ತಿದ್ದವು ಮತ್ತು ಅವರೂ ಸಹ ಈ ಸಂಕಟಗಳನ್ನು ಎದುರಿಸಬೇಕೆಂದು ಇರಿಸಲ್ಪಟ್ಟಿದ್ದವರು.

b. ಎಲೀಯನ ಮೇಲೆ ಒತ್ತಡಗಳನ್ನು ನಿರಂತರವಾಗಿ ತರುವುದರ ಮೂಲಕ ಆತನು ದೇವರನ್ನೇ ಸಂಪೂರ್ಣವಾಗಿ ಆತುಕೊಳ್ಳುವಂತಾಗಬೇಕು.

c. ಆ ಬಡ ವಿಧವೆಗೆ ಯೆಹೋವನೊಬ್ಬನೇ ನಿಜವಾದ ದೇವರು ಎಂದು ತಿಳಿಸಿಕೊಡಬೇಕಾದ್ದರಿಂದಲೇ.

**ಮುಕ್ತಾಯ**

A. ನಮ್ಮ ಜೀವಿತದಲ್ಲಿ ಸಂಭವಿಸುವ ಸಂಗತಿಗಳ ಮೂಲಕ ದೇವರು ನಮ್ಮನ್ನು ಮರೆತುಬಿಟ್ಟಿದ್ದಾನೆ ಎಂದಲ್ಲ ಆದರೆ ಆತನು ಇನ್ನೂ ನಮ್ಮನ್ನು ಪ್ರೀತಿಸುತ್ತಾನೆ ನಮಗೆ ಒದಗಿಸುತ್ತಾನೆ ಎಂಬುದು ನಮಗೆ ಅರಿವಾಗಬೇಕು ಎಂಬುದು ಮಹತ್ವದದ್ದಾಗಿದೆ (ಯೆಶಾಯ 49:14-16)!

B. 1 ಅರಸು 17:1-15ರಲ್ಲಿ ಕೆಲಶ್ರೇಷ್ಟ ಪಾಠಗಳಿವೆ:

1. ನೀನು ತಿಳಿಯದಿದ್ದಾಗ್ಯೂ ಕೂಡಾ ದೇವರಿಗೆ ವಿಧೇಯನಾಗು.

2. ನೀನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದಿದ್ದಾಗಲೂ ಕೂಡಾ ದೇವರಲ್ಲಿ ವಿಶ್ವಾಸವಿಡು.

3. ನೀನೇನನ್ನೋ ಹೊಂದಲಿರುವಿ ಎಂಬುದು ನಿನಗೆ ತಿಳಿಯದಿದ್ದಾಗಲೂ ಕೂಡ, ನೀನು ಹೊಂದಿರುವುಕ್ಕಾಗಿ ದೇವರಿಗೆ ಸ್ತೋತ್ರ ಹೇಳು.